ಸಂಪುಟ : 8 ಸಂಚಿಕೆ : 182 ಪುಟ : 4 ಬೆಲೆ : 3.00 ಬುಧವಾರ ಆಗಸ್ಟ್ 23, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 182 Pages : 4 Price : 3.00 Wednesday August 23, 2023 Gadag RNI No: KARKAN/2015/63412 E-mail: vijayasakshidaily@gmail.com Post Regn.No: GDG/72/2023-25

## ಗದಗ-ಬೆಟಗೇರಿ ಅವಳಿ ನಗರದಲ್ಲಿ ಇಂದು ನೀರು ಪೂರೈಕೆ ಎಲ್ಲೆಲ್ಲಿ?

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ-ಬೆಟಗೇರಿ ಅವಳಿ ನಗರದಲ್ಲಿ ಬುಧವಾರ ನೀರು ಪೂರೈಕೆಯಾಗಲಿರುವ ಸ್ಥಳಗಳ ಮಾಹಿತಿ ಹೀಗಿದೆ.



ವಾರ್ಡ್ ನಂ.29ರ ಟೀಚರ್ಸ್ ಕಾಲೋನಿ ಲೈನ್, ವಾರ್ಡ್ ನಂ.22ರ ಗಂಗಿಮಡಿ, ದೊಡ್ಡಮನಿ ಲೈನ್, ವಾರ್ಡ್ ನಂ.16ರ ಡಿ.ಸಿ ಮಿಲ್ ರೋಡ್, ಪಲ್ಲೇದರ ಲೈನ್, ಡೋರಗಲ್ಲಿ ಭಾಗ-1, 2, ವಾರ್ಡ್ ನಂ.14ರ ಟ್ಯಾಗೋರ ಲೈನ್, ಭಾಗ-1, 2, ಹಣಗಿ ಲೈನ್, ಕುರಡಗಿಯವರ ಲೈನ್, ವಾರ್ಡ್ ನಂ.13ರ ಹಾದಿಮನಿ ವಕೀಲರ ಲೈನ್, ಸೋನಿಯವರ ಲೈನ್, ಪೊಲೀಸ್ ಕ್ವಾಟ್ರಸ್ ಲೈನ್, ಕೆ.ಸಿ ರಾಣಿ ರೋಡ್, ತಡಿಯಾರ ಲೈನ್, ಪತ್ತೆಪೂರ ಲೈನ್, ವಾರ್ಡ್ ನಂ.12ರ ಆನಂದ ಸರ್ಕಲ್, ಗಣಪತಿ ಗುಡಿ ಹಿಂದೆ, ಜಿಣಿಗಿಯವರ ಲೈನ್, ಈದಗಾ ಕಾಂಪ್ಲೆಕ್ಸ್, 1, 2, 3ನೇ ಕ್ರಾಸ್, ಜಾದವರ ಲೈನ್, ತೊಪಿಯವರ ಲೈನ್, ಉಪ್ಪಿನ ಲೈನ್, ವಾರ್ಡ್ ನಂ.6ರ ಫಣಿಬಂದ ಲೈನ್, ಕರಿಡಿಯವರ ಲೈನ್, ಗಣೇಶನಗರ ಲೈನ್ ಭಾಗ-1ರಿಂದ 4, ಶಿವನಾಗ ನಗರ ಲೈನ್ ಭಾಗ-1ರಿಂದ 4, ನಾವಳ್ಳಿ ಲೈನ್, ಮಳಲಿ ಪೂಜಾರ ಲೈನ್, ವಾರ್ಡ್ ನಂ 11, 12, ಕರಿಯಮ್ಮಕಲ್ಲು, ಇರಾಣಿ ಕಾಲೋನಿಯ ಶಿವಾನಂದ ಗಾರ್ಡನ್, ವಾರ್ಡ್ ನಂ. 33ರ ಕೇಶವನಗರ, ಮುಳಗುಂದ ರೋಡ್, ಅಪಾರ್ಟ್‌ಮೆಂಟ್, ಪೂಜಾರ ಲೈನ್, ತಾಜ್‌ನಗರ, ಉದಯನಗರಗಳಲ್ಲಿ ನೀರು ಪೂರೈಕೆಯಾಗಲಿದೆ.

ನೀರು ಪೂರೈಕೆಯಲ್ಲಿ ತಾಂತ್ರಿಕ ಕಾರಣಗಳಿಂದ ಅಡತಡೆಯಾದಲ್ಲಿ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸಬೇಕೆಂದು ಪ್ರಕಟಣೆ ತಿಳಿಸಿದೆ.

### ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆ: ಮನೆ ಮನೆಗೆ ಭೇಟಿ ನೀಡಿದ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್

# ನಕಲಿ ಮತದಾನ ತಡೆಗೆ ಸಾರ್ವಜನಿಕರು ಸಹಕರಿಸಿ



■ ವಿಜಯಸಾಕ್ಷಿ ಸುದ್ದಿ, ಗದಗ

ಮತದಾರರ ಪಟ್ಟಿ ಪರಿಷ್ಕರಣೆಗೆ ಸಂಬಂಧಿಸಿದಂತೆ ಜಿಲ್ಲಾ ಚುನಾವಣಾಧಿಕಾರಿಗಳೂ ಆಗಿರುವ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್ ಅವರು ನಗರದ ಗಂಗಾಪುರ ಪೇಟೆ, ಹುಲಕೋಟಿ ಗ್ರಾಮ ಸೇರಿದಂತೆ ವಿವಿಧ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲಿಸಿದರು.

ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯಕ್ಕೆ (ಬಿಎಲ್‌ಓ) ಬೂತ್ ಮಟ್ಟದ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ. ಈ ಅಧಿಕಾರಿಗಳು ಮನೆಗೆ ಬಂದಾಗ ಸೂಕ್ತ ದಾಖಲಾತಿ ಹಾಗೂ ಮಾಹಿತಿ ಒದಗಿಸಬೇಕು. ಮತದಾರರ ಪಟ್ಟಿ ಪರಿಷ್ಕರಣೆಗೆ ಸಹಕರಿಸಿ ಚುನಾವಣೆಯ ಸಂದರ್ಭದಲ್ಲಿ ನಕಲಿ ಮತದಾನ ತಡೆಗೆ ಸಾರ್ವಜನಿಕರು ಸಹಕಾರ ನೀಡಬೇಕು. ನಿಯೋಜಿತ ಬಿಎಲ್‌ಓಗಳು ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯವನ್ನು ನಿಗದಿತ ಕಾಲಮಿತಿಯೊಳಗೆ, ವ್ಯವಸ್ಥಿತವಾಗಿ ನಿರ್ವಹಿಸಬೇಕೆಂದರು.

ಸಲ್ಲಿಕೆಯಾದ ಅರ್ಜಿಗಳನ್ನು ಆಯಾ ತ್ರೈಮಾಸಿಕಗಳಲ್ಲಿ ಅರ್ಹತೆಯನ್ನು ಪರಿಶೀಲಿಸಿ, ನಿಯಮಾನುಸಾರ ನೋಂದಣಿ ಮಾಡಿಕೊಳ್ಳಲಾಗುವುದು. ಮತದಾರರ ಪಟ್ಟಿಯಲ್ಲಿ ಹೊಸದಾಗಿ ಹೆಸರನ್ನು ಸೇರ್ಪಡೆ ಮಾಡಲು ನಮೂನೆ 6ರಲ್ಲಿ ಅರ್ಜಿ ಸಲ್ಲಿಸುವ ಅರ್ಜಿದಾರರು ಅರ್ಜಿಗೆ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಫೋಟೋ, ವಿಳಾಸದ ಬಗ್ಗೆ ದಾಖಲೆಗಳು ಹಾಗೂ ವಯಸ್ಸಿನ ಬಗ್ಗೆ ದಾಖಲೆಗಳನ್ನು ನೀಡಬೇಕಾಗುತ್ತದೆ.

ಮತದಾರರ ಪಟ್ಟಿಯಿಂದ ಹೆಸರನ್ನು ತೆಗೆದುಹಾಕಲು ನಮೂನೆ 7ರಲ್ಲಿ ಅರ್ಜಿ ಸಲ್ಲಿಸಬೇಕು. ಮತದಾರರ ನಿವಾಸ ಬದಲಾವಣೆಯಿದ್ದಲ್ಲಿ (ಮತದಾರ ಪಟ್ಟಿಯ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಸ್ಥಳಾಂತರವಾಗಿದ್ದಲ್ಲಿ) ಪ್ರಸ್ತುತ ಮತದಾರರ ಪಟ್ಟಿಯಲ್ಲಿರುವ ನಮೂದುಗಳನ್ನು ಸರಿಪಡಿಸಬೇಕಾಗಿದ್ದಲ್ಲಿ, ಯಾವುದೇ ತಿದ್ದುಪಡಿಗಳಿಲ್ಲದೇ ಬದಲಿ ಮತದಾರರ ಗುರುತಿನ ಚೀಟಿ(ಎಪಿಕ್ ಕಾರ್ಡ್) ಅವಶ್ಯಕತೆ ಇದ್ದಲ್ಲಿ ಅಥವಾ ಅಂಗವಿಕಲ ವ್ಯಕ್ತಿ ಎಂದು ಗುರುತಿಸುವುದಕ್ಕೆ ಮನವಿ ಸಲ್ಲಿಸಬೇಕಾಗಿದ್ದಲ್ಲಿ ನಮೂನೆ 8ರಲ್ಲಿ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿಗಳೂ ಆದ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್ ತಿಳಿಸಿದರು. ಈ ಸಂದರ್ಭದಲ್ಲಿ ಚುನಾವಣಾ ಶಾಖೆಯ ತಹಸೀಲ್ದಾರರು, ಶಿರಸ್ತೇದಾರರು, ಸಿಬ್ಬಂದಿಗಳು, ಬಿಎಲ್‌ಓಗಳು, ಸಾರ್ವಜನಿಕರು ಹಾಜರಿದ್ದರು.

> 18 ವರ್ಷ ಪೂರ್ಣಗೊಂಡಿರುವವರು, ಮತದಾರರ ಯಾದಿಗಳಲ್ಲಿ ಹೆಸರು ಇಲ್ಲದವರು ಈ ಅವಧಿಯಲ್ಲಿ ತಮ್ಮ ಹೆಸರುಗಳನ್ನು ನಮೂನೆ ನಂ.6ರಲ್ಲಿ ಸಲ್ಲಿಸಬಹುದು. ವರ್ಷದಲ್ಲಿ 4 ಬಾರಿ ಅರ್ಹತಾ ದಿನಾಂಕವನ್ನು ಆಯೋಗ ನಿಗದಿಪಡಿಸಿದೆ. ಜನವರಿ 1, ಎಪ್ರಿಲ್ 1, ಜುಲೈ1, ಅಕ್ಟೋಬರ್ 1ರಂದು 18 ವರ್ಷ ವಯಸ್ಸು ಪೂರ್ಣಗೊಳ್ಳುವವರು ಕರಡು ಮತದಾರ ಪಟ್ಟಿ ಪ್ರಕಟಣೆ ದಿನಾಂಕದಿಂದ ನಮೂನೆ 6ರಲ್ಲಿ ಸೇರ್ಪಡೆಗೊಳಿಸಲು ಅರ್ಜಿ ಸಲ್ಲಿಸಬಹುದಾಗಿದೆ.
>
> **– ವೈಶಾಲಿ ಎಂ.ಎಲ್.**
>
> ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳು.



## ಅರಸು ಜನ್ಮದಿನ: ಅರ್ಥಪೂರ್ಣ ಆಚರಣೆಗೆ ಸಿದ್ಧತೆ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾಡಳಿತ, ಜಿ.ಪಂ. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಡಿ. ದೇವರಾಜ ಅರಸು ಜನ್ಮದಿನಾಚರಣೆಯನ್ನು ನಗರದ ಕನಕ ಭವನದಲ್ಲಿ ಆಗಸ್ಟ್ 28 ಬೆಳಿಗ್ಗೆ 10 ಗಂಟೆಗೆ ಅರ್ಥಪೂರ್ಣವಾಗಿ ಆಚರಿಸಬೇಕೆಂದು ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ತಿಳಿಸಿದರು.



ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಇತ್ತೀಚೆಗೆ ಕರ್ನಾಟಕದ ಮಾಜಿ ಮುಖ್ಯಮಂತ್ರಿ ಡಿ. ದೇವರಾಜ ಅರಸುರವರ 108 ನೇ ಜನ್ಮ ದಿನಾಚರಣೆ ಕುರಿತು ಹಮ್ಮಿಕೊಳ್ಳಲಾಗಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿ ರವಿ ಗುಂಜಿಕರ್ ಮಾತನಾಡಿ, ಕಳೆದ ವರ್ಷ ಡಿ.ದೇವರಾಜ ಅರಸುರವರ ಜನ್ಮದಿನಾಚರಣೆ ಸಂದರ್ಭದಲ್ಲಿ ಮೂರು ದಿನಗಳ ಕಾಲ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಪ್ರಸಕ್ತ ವರ್ಷ ಡಿ.ದೇವರಾಜ ಅರಸುರವರ ಜನ್ಮದಿನಾಚರಣೆ ನಿಮಿತ್ತ ಆಗಸ್ಟ್ 28 ರಂದು ಕಾರ್ಯಕ್ರಮಕ್ಕೂ ಮುನ್ನ ಬೆಳಿಗ್ಗೆ 7 : 30ಕ್ಕೆ ನಗರದ ಚೆನ್ನಮ್ಮ ವೃತ್ತದಿಂದ ಕನಕ ಭವನದವರೆಗೆ ಡಿ.ದೇವರಾಜ ಅರಸು ಅವರ ಭಾವಚಿತ್ರ ಮೆರವಣಿಗೆ ಜರುಗುವುದು. ಮೆರವಣಿಗೆಯಲ್ಲಿ ವಿವಿಧ ಕಲಾ ತಂಡಗಳ ಕಲಾವಿದರಿಂದ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. 2022-23 ನೇ ಸಾಲಿನಲ್ಲಿ ಹತ್ತನೇ ತರಗತಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಶಾಲಾ ಮಕ್ಕಳಿಗೆ ರಂಗೋಲಿ ಸ್ಪರ್ಧೆ ಮತ್ತು ವಿವಿಧ ಕ್ರೀಡಾ ಚಟುವಟಿಕೆಗಳನ್ನು ಆಯೋಜಿಸಲಾಗುವುದು.

ಕನಕ ಭವನದ ಮುಖ್ಯ ಪ್ರವೇಶದಲ್ಲಿ ಡಿ. ದೇವರಾಜ ಅರಸು ಅವರ ಜೀವನ ಚರಿತ್ರೆಯ ಬಗ್ಗೆ ಛಾಯಾ ಚಿತ್ರಗಳೊಂದಿಗೆ ಶಾಲಾ ಮಕ್ಕಳಿಗೆ ವಿವರಗಳನ್ನು ನೀಡಲಾಗುವುದು ಎಂದು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿಗಳು ರವಿ ಗುಂಜಿಕರ ತಿಳಿಸಿದರು.

ಸಭೆಯಲ್ಲಿ ಕಾರ್ಯಕ್ರಮದ ಸ್ಥಳದ ಸ್ವಚ್ಛತೆ, ವೇದಿಕೆ ವ್ಯವಸ್ಥೆ, ಸಾಂಸ್ಕೃತಿಕ ಕಾರ್ಯಕ್ರಮಗಳು, ಶಿಷ್ಟಾಚಾರದನ್ವಯ ▸▸3 ನೇ ಪುಟಕ್ಕೆ

## ಈಜುಕೊಳಗಳು ಸಾರ್ವಜನಿಕರ ಸೇವೆಗೆ ಲಭ್ಯ



■ ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಕೆ.ಎಚ್. ಪಾಟೀಲ ಜಿಲ್ಲಾ ಕ್ರೀಡಾಂಗಣದ ಆವರಣದಲ್ಲಿರುವ ಈಜುಕೊಳ ಹಾಗೂ ರಾಜೀವಗಾಂಧಿ ನಗರದಲ್ಲಿರುವ ಸ್ವಾಮಿ ವಿವೇಕಾನಂದ ಈಜುಕೊಳಗಳನ್ನು ದುರಸ್ಥಿಗೊಳಿಸಿ ಈಗಾಗಲೇ ಪ್ರಾರಂಭಿಸಲಾಗಿದೆ. ಸದರಿ ಈಜುಕೊಳಗಳಲ್ಲಿ ನುರಿತ ತರಬೇತುದಾರರದಿಂದ ಈಜು ತರಬೇತಿಯನ್ನು ನೀಡಲಾಗುತ್ತಿದೆ.

ಆಸಕ್ತ ಕ್ರೀಡಾಪಟುಗಳು ತರಬೇತಿಯನ್ನು ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರ ಕಾರ್ಯಾಲಯ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಗದಗ ದೂರವಾಣಿ ಸಂಖ್ಯೆ 08372-238345 ಹಾಗೂ ತರಬೇತುದಾರರಾದ ಶಿವಾನಂದ ಎಂ. ಮೊಬೈಲ್ ನಂ. 73386-89385 ಗೆ ಸಂಪರ್ಕಿಸಲು ಕೋರಲಾಗಿದೆ.

## ರಾಷ್ಟ್ರೀಯ ಕ್ರೀಡಾ ದಿನದ ಪ್ರಯುಕ್ತ ವಿವಿಧ ಸ್ಪರ್ಧೆ

■ ವಿಜಯಸಾಕ್ಷಿ ಸುದ್ದಿ, ಗದಗ

ಆಗಸ್ಟ್ 29 ರಂದು ಮೇಜರ್ ಧ್ಯಾನ್‌ಚಂದರವರ ಜನ್ಮದಿನದ ಪ್ರಯುಕ್ತ ರಾಷ್ಟ್ರೀಯ ಕ್ರೀಡಾ ದಿನಾಚರಣೆಯನ್ನು ಆಚರಿಸಲಾಗುತ್ತಿದೆ. ಪ್ರಸ್ತುತ ಸಾಲಿನಲ್ಲಿ ರಾಷ್ಟ್ರೀಯ ಕ್ರೀಡಾ ದಿನಾಚರಣೆಯನ್ನು ಜಿಲ್ಲೆಯಲ್ಲಿ ಆಚರಿಸುವ ಸಲುವಾಗಿ 16 ರಿಂದ 29 ವರ್ಷದೊಳಗಿನ ವಯೋಮಾನದ ಪುರುಷರಿಗೆ ಮತ್ತು ಮಹಿಳೆಯರಿಗೆ ಪ್ರತ್ಯೇಕವಾಗಿ ಜಿಲ್ಲೆಯ ಕೆ,ಎಚ್ ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ಆಗಸ್ಟ್ 29ರಂದು ಬೆಳಗ್ಗೆ 9 ಘಂಟೆಯಿಂದ ಸಂಜೆವರೆಗೆ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ಈ ಕ್ರೀಡಾಕೂಟದಲ್ಲಿ ಭಾಗವಹಿಸಿ ವಿಜೇತರಾದ ಕ್ರೀಡಾಪಟುಗಳಿಗೆ ಪ್ರಶಸ್ತಿ ಪತ್ರ ಮತ್ತು ಪದಕಗಳನ್ನು ನೀಡಲಾಗುವುದು.

ಪುರುಷ ಮತ್ತು ಮಹಿಳೆಯರಿಗೆ ಶೆಟಲ್ ಬ್ಯಾಡ್ಮಿಂಟನ್, ಟೇಬಲ್ ಟೆನ್ನಿಸ್, ಹಗ್ಗ ಜಗ್ಗಾಟ, ನಡಿಗೆ ಸ್ಪರ್ಧೆಗಳು, ಪುರುಷರಿಗಾಗಿ ಬಾಸ್ಕೆಟ್ ಬಾಲ್, ವಾಲಿಬಾಲ್, ಮಿನಿ ಫುಟ್ ಬಾಲ್ ( 3 vs ) ಹಾಕಿ ಸ್ಪರ್ಧೆಗಳು ,

ಮಹಿಳೆಯರಿಗಾಗಿ ಖೋ-ಖೋ, ಲಿಂಬು ಚಮಚ ಸ್ಪರ್ಧೆಗಳು ಜರುಗಲಿವೆ.

ಆಸಕ್ತ 16 ವರ್ಷದಿಂದ 29 ವರ್ಷದೊಳಗಿನ ಪುರುಷ ಮತ್ತು ಮಹಿಳಾ ಗದಗ ಜಿಲ್ಲೆಯ ಕ್ರೀಡಾಪಟುಗಳು ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕೆ.ಎಚ್ ಪಾಟೀಲ ಜಿಲ್ಲಾ ಕ್ರೀಡಾಂಗಣ ಗದಗ ಇವರ ಕಛೇರಿ ಸಮಯದಲ್ಲಿ ದೂರವಾಣಿ ಸಂಖ್ಯೆ: 08372-238345 ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

### ಇಷ್ಟಾರ್ಥ ಸಿದ್ಧಿಗಾಗಿ ಗಲ್ಲ, ನಾಲಿಗೆ, ತುಟಿಗೆ ಶಸ್ತ್ರಧಾರಣೆ

## ಸಂಭ್ರಮದ ಶ್ರೀ ವೀರಭದ್ರೇಶ್ವರ ಅಗ್ನಿಮಹೋತ್ಸವ

■ ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ತಾಲೂಕಿನ ಮಾಗಡಿ ಗ್ರಾಮದಲ್ಲಿ ಶ್ರಾವಣ ಮಾಸದ ಷಷ್ಠಿ ದಿನವಾದ ಮಂಗಳವಾರ ಶ್ರೀ ವೀರಭದ್ರೇಶ್ವರ ಅಗ್ನಿಮಹೋತ್ಸವವು ಸಂಭ್ರಮದಿಂದ ಜರುಗಿತು. ಗ್ರಾಮದ ಪುರವಂತರು ಹಾಗೂ ವಿವಿಧ ಸ್ಥಳಗಳಿಂದ ಆಗಮಿಸಿದ್ದ ಪುರವಂತರು ಸೇರಿದಂತೆ ಅನೇಕರು ಮಧ್ಯಾಹ್ನ 2 ಗಂಟೆ ಸುಮಾರಿಗೆ ದೇವಸ್ಥಾನದ ಆವರಣದಲ್ಲಿ ನಿರ್ಮಿಸಿದ್ದ ಅಗ್ನಿಕುಂಡದಲ್ಲಿ ಅಗ್ನಿಹಾಯುವ ಮೂಲಕ ಶ್ರೀ ವೀರಭದ್ರ ದೇವರ ಕೃಪೆಗೆ ಪಾತ್ರರಾದರು.



ಗ್ರಾಮದಲ್ಲಿ ಸೋಮವಾರ ರಾತ್ರಿಯಿಂದಲೇ ಶ್ರೀ ವೀರಭದ್ರೇಶ್ವರ ಜಾತ್ರಾ ಮಹೋತ್ಸವದ ನಿಮಿತ್ತ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ, ಅಹೋರಾತ್ರಿ ಭಜನಾ ಜಾಗರಣೆ ಜರುಗಿತು. ಮಂಗಳವಾರ ಸಂಪ್ರದಾಯದಂತೆ ನಸುಕಿನ 5 ಗಂಟೆಗೆ ▸▸3ನೇ ಪುಟಕ್ಕೆ

## ತ್ಯಾಜ್ಯ ನಿರ್ವಹಣೆ ಕುರಿತು ರಾಜ್ಯ ಮಟ್ಟದ ಕಾರ್ಯಾಗಾರ

■ ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಧಾರವಾಡ, ಕೆಎಲ್‌ಇ ತಾಂತ್ರಿಕ ವಿಶ್ವವಿದ್ಯಾಲಯ ಹುಬ್ಬಳ್ಳಿ, ಸೆಂಟರ್ ಫಾರ್ ಆಶ್ ಯುಟಿಲಿಜೇಶನ್ ಟೆಕ್ನಾಲಜಿ ಆ್ಯಂಡ್ ಎನ್ವಿರಾನ್‌ಮೆಂಟ್ ಕನ್ವೆನ್ಷನ್ ಶಕ್ತಿನಗರ, ದಾಕ್ಷಾಯಿಣಿ ಭಾಲಚಂದ್ರ ಜಾಬಶೆಟ್ಟಿ ಫೌಂಡೇಶನ್ ರಾಮದುರ್ಗ ಹಾಗೂ ಗ್ರೀನ್‌ಲ್ಯಾಂಡ್ ಬಾಯೋಟೆಕ್ ರಾಮದುರ್ಗ ಇವುಗಳ ಸಹಯೋಗದಲ್ಲಿ ಆ.26ರಂದು 'ತ್ಯಾಜ್ಯ ನಿರ್ವಹಣೆ ಜೈವಿಕ ಪರಿಹಾರ ಮತ್ತು ಜೈವಿಕ ಗಣಿಗಾರಿಕೆ' ಕುರಿತು ಒಂದು ದಿನದ ರಾಜ್ಯ ಮಟ್ಟದ ಕಾರ್ಯಾಗಾರವನ್ನು ಕೆಎಲ್‌ಇ ತಾಂತ್ರಿಕ ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಸಿವಿಲ್ ಇಂಜಿನಿಯರಿಂಗ್‌ನ ಪಿ.ಜಿ ಸೆಮಿನಾರ್ ಹಾಲ್‌ನಲ್ಲಿ ಆಯೋಜಿಸಲಾಗಿದೆ.

ತ್ಯಾಜ್ಯ ನಿರ್ವಹಣಾ ತಜ್ಞರು, ನಗರ ಸಭೆಗಳ ಪರಿಸರ ಅಭಿಯಂತರರು, ▸▸3ನೇ ಪುಟಕ್ಕೆ

## ಸ್ಥಿರಾಸ್ತಿಗಳ ಬೆಲೆ ಪರಿಷ್ಕರಣೆ: ಆಕ್ಷೇಪಣೆ ಸಲ್ಲಿಕೆಗೆ ಅವಕಾಶ

■ ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ

ಕುಂದಗೋಳ ಉಪನೋಂದಣಿ ಕಛೇರಿಯ ವ್ಯಾಪ್ತಿಯ ಎಲ್ಲಾ ಸ್ಥಿರಾಸ್ತಿಗಳ ಮಾರ್ಗಸೂಚಿಗಳ ಬೆಲೆಯನ್ನು ಪರಿಷ್ಕರಿಸಲಾಗಿದೆ.

ಈ ಕುರಿತು ಸಾರ್ವಜನಿಕರ ಆಕ್ಷೇಪಣೆ ಅಥವಾ ಸಲಹೆ-ಸೂಚನೆಗಳಿದ್ದಲ್ಲಿ sr.kundgola@karnataka.gov.in ಅಥವಾ ಲಿಖಿತ ಪತ್ರದ ಮೂಲಕ ಸದಸ್ಯ ಕಾರ್ಯದರ್ಶಿ, ಕುಂದಗೋಳ ತಾಲೂಕು ಸ್ಥಿರಾಸ್ತಿಗಳ ಮೌಲ್ಯಮಾಪನ ನಿರ್ಧರಣಾ ಉಪ ಸಮಿತಿ ಹಾಗೂ ಉಪನೋಂದಣಾಧಿಕಾರಿ ಕುಂದಗೋಳ ಅವರಿಗೆ ಸೆಪ್ಟಂಬರ್ 2ರೊಳಗಾಗಿ ಸಲ್ಲಿಸಬಹುದಾಗಿದೆ. ಅವಧಿ ನಂತರ ಬಂದ ಆಕ್ಷೇಪಣೆಗಳನ್ನು ತಿರಸ್ಕರಿಸಲಾಗುವುದು ಎಂದು ಉಪ ಸಮಿತಿಯ ಸದಸ್ಯ ಕಾರ್ಯದರ್ಶಿಗಳು ಹಾಗೂ ಉಪನೋಂದಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಕಾರು ಕಳ್ಳನನ್ನು ಸಿನಿಮೀಯ ರೀತಿಯಲ್ಲಿ ಬೆನ್ನಟ್ಟಿ ಹಿಡಿದ ಲಕ್ಷ್ಮೇಶ್ವರ ಪೊಲೀಸರ ತಂಡ

# 15 ಲಕ್ಷ ರೂ. ಮೌಲ್ಯದ 3 ವಾಹನಗಳು ವಶಕ್ಕೆ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಅಂತರ್‌ರಾಜ್ಯಗಳಲ್ಲಿ ಕಾರುಗಳನ್ನು ಕಳ್ಳತನ ಮಾಡುತ್ತಿದ್ದ ಶಿವಮೊಗ್ಗ ಜಿಲ್ಲೆಯ ಉಂಬಳಬೈಲ್‌ದ ಸೈಯದ್ ಇರ್ಫಾನ್ ಅಲಿಯಾಸ್ ನಿಹಾಲ್‌ನನ್ನು ಲಕ್ಷ್ಮೇಶ್ವರ ಪೊಲೀಸರು ಸಿನಿಮೀಯ ರೀತಿಯಲ್ಲಿ ಬೆನ್ನಟ್ಟಿ ಹಿಡಿದು ಬಂಧಿತನಿಂದ 3 ಕಾರುಗಳನ್ನು ವಶಪಡಿಸಿಕೊಂಡಿದ್ದಾರೆ.

ಖಚಿತ ಮಾಹಿತಿಯ ಹಿನ್ನಲೆಯಲ್ಲಿ ಆತ ಕದ್ದ ಕಾರುಗಳನ್ನು ಮಾರಾಟ ಮಾಡಲು ಲಕ್ಷ್ಮೇಶ್ವರದ ರಂಭಾಪುರಿ ನಗರದಲ್ಲಿದ್ದಾನೆಂಬ ಸುಳಿವು ಪಡೆದ ಪೊಲೀಸರ ತಂಡ ಕಾರ್ಯಾಚರಣೆ ನಡೆಸಿತು. ಪೊಲೀಸರನ್ನು ಕಂಡು ತಪ್ಪಿಸಿಕೊಂಡು ಹೋಗುತ್ತಿರುವಾಗ ಪೊಲೀಸರು ತಮ್ಮ ವಾಹನದಲ್ಲಿ ಬೆನ್ನಟ್ಟಿ ಹಿಡಿದು, ವಿಚಾರಣೆಗೊಳಪಡಿಸಿ ಆತನಿಂದ ಮೂರು ಕಾರುಗಳನ್ನು ವಶಪಡಿಸಿಕೊಂಡಿದ್ದಾರೆ.



ಅಂದಾಜು 5 ಲಕ್ಷ ರೂ. ಮೌಲ್ಯದ ಮಹೀಂದ್ರಾ ಸ್ಕಾರ್ಪಿಯೋ, ಅಂದಾಜು 7 ಲಕ್ಷ ರೂ.ಗಳ ಮಾರುತಿ ಬ್ರಿಝಾ, 3 ಲಕ್ಷ ರೂ.ಗಳ ಕಿಮ್ಮತ್ತಿನ ಮಾರುತಿ ಇಕೋ ವ್ಯಾನ್ ಸೇರಿ ಒಟ್ಟು 15 ಲಕ್ಷ ರೂ. ಮೌಲ್ಯದ ಮೂರು ವಾಹನಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಕಾರು ಕಳ್ಳನನ್ನು ಪತ್ತೆ ಹಚ್ಚುವಲ್ಲಿ ಯಶಸ್ವಿಯಾದ ಸಿಪಿಐ ಎಸ್.ಎಂ ಶಿರಗುಪ್ಪಿ, ಪಿಎಸ್‌ಐ ಯೂಸುಫ್ ಜಮೂಲಾ, ಕ್ರೈಂ ಪಿಎಸ್‌ಐ ವಿ.ಜಿ ಪವಾರ, ಎಎಸ್‌ಐ ಎಮ್.ಎ ಮೌಲ್ವಿ, ಟಿ.ಕೆ ರಾಠೋಡ, ವೈ. ಎಸ್ ಕುಬಿಹಾಳ ಎಸ್.ಎಸ್ ಮಕಾನದಾರ, ಜಿ.ಎಂ ಬೂದಿಹಾಳ, ▸▸3ನೇ ಪುಟಕ್ಕೆ

# ಕರ್ತವ್ಯ ಲೋಪವೆಸಗಿದ ಗ್ರಾಮ ಆಡಳಿತಾಧಿಕಾರಿ ಅಮಾನತು

■ವಿಜಯಸಾಕ್ಷಿ ಸುದ್ದಿ, ಗದಗ

ಬಿಎಲ್‌ಓಗಳಿಗೆ ಮೇಲ್ವಿಚಾರಕರ ಕಾರ್ಯದಲ್ಲಿ ನಿರ್ಲಕ್ಷ್ಯ ತೆ- ೂರಿದ್ದರಿಂದ ಗದಗ ತಾಲೂಕಿನ ಹುಲಕೋಟಿ ಗ್ರಾಮ ಆಡಳಿತ ಅಧಿಕಾರಿ ಶ್ರೀಮತಿ ವಿ.ಬಿ ಪಾಟೀಲ ಅವರನ್ನು ಅಮಾನತು ಮಾಡಿ ಜಿಲ್ಲಾಧಿಕಾರಿಗಳು ಆದೇಶ ಹೊರಡಿಸಿದ್ದಾರೆ.

ಮತಗಟ್ಟೆ ಸಂಖ್ಯೆ 137ರಿಂದ 145 ರವರೆಗಿನ ಬಿಎಲ್ ಓ ಗಳಿಗೆ ಮೇಲ್ವಿಚಾರಕರಾಗಿ ನೇಮಿಸಲಾಗಿದೆ.

ವಿಧಾನಸಭಾ ಕ್ಷೇತ್ರಗಳ ಮತದಾರ ಪಟ್ಟಿಗಳ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ 2023-24 ನೇದ್ದಕ್ಕೆ ಭಾರತ ಚುನಾವಣಾ ಆಯೋಗವು ವೇಳಾಪಟ್ಟಿ ಹೊರಡಿಸಿದೆ. ಹೀಗಾಗಿ ವೇಳಾಪಟ್ಟಿಯಂತೆ ಪ್ರಸ್ತುತ ಪೂರ್ವ ಪರಿಷ್ಕರಣೆ ಚಟುವಟಿಕೆಗಳು ಜರುಗುತ್ತಿದ್ದು, ಅದರಂತೆ ಮತಗಟ್ಟೆ ಅಧಿಕಾರಿಗಳು ಮನೆ ಮನೆ ಸಮೀಕ್ಷೆ ಕಾರ್ಯ ಜರುಗಿಸಿ ಮತದಾರ ಪಟ್ಟಿಗೆ ಹಕ್ಕು ಮತ್ತು ಆಕ್ಷೇಪಣೆಗಳನ್ನು ಸ್ವೀಕರಿಸಿರುತ್ತಾರೆ. ಈ ಕುರಿತಂತೆ ಹುಲಕೋಟಿ ಗ್ರಾಮ ಆಡಳಿತ ಅಧಿಕಾರಿ ಶ್ರೀಮತಿ ವಿ.ಬಿ.ಪಾಟೀಲ ಇವರನ್ನು ಮತಗಟ್ಟೆ ಸಂಖ್ಯೆ 137 ರಿಂದ 145ರವರೆಗಿನ ಬಿ.ಎಲ್.ಓಗಳಿಗೆ ಮೇಲ್ವಿಚಾರಕರನ್ನಾಗಿ ನೇಮಿಸಲಾಗಿದೆ.

ಈ ಕುರಿತು ಜಿಲ್ಲಾಧಿಕಾರಿಗಳು ದಿ.19-08-23ರಂದು ಮತಗಟ್ಟೆ ಸಂಖ್ಯೆ 137 ರಿಂದ 145 ಭೇಟಿ ನೀಡಿದ್ದರು. ಆದರೆ ಈ ಮತಗಟ್ಟೆ ಬಿ.ಎಲ್.ಓ ಗಳು ಆಯೋಗದ ನಿಗದಿತ ನಮೂನೆ -03ನ್ನು ಕಾಲೋಚಿತಗೊಳಿಸಿದ್ದು ಕಂಡು ಬಂದಿಲ್ಲ.

ಅಲ್ಲದೇ ಮನೆ ಮನೆಗೆ ಭೇಟಿ ನೀಡಿ ಸಮೀಕ್ಷೆ ಕಾರ್ಯವನ್ನು ಸರಿಯಾಗಿ ನಿರ್ವಹಿಸಿದ್ದು ಕಂಡು ಬಂದಿಲ್ಲ. ಹಾಗೂ ನಿಗದಿತ ಪ್ರಮಾಣದಲ್ಲಿ ಹಕ್ಕು ಮತ್ತು ಆಕ್ಷೇಪಣೆಗಳನ್ನು ಸ್ವೀಕರಿಸಿರುವುದಿಲ್ಲ. ಈ ಕುರಿತಂತೆ ದಿ. 21.07.2023ರಿಂದ 21.8.2023 ರವರೆಗೆ ಮತಗಟ್ಟೆ ಮಟ್ಟದ ಅಧಿಕಾರಿಗಳು ಮನೆ ಮನೆಗೆ ಭೇಟಿ ನೀಡಿ ಮತದಾರ ಪಟ್ಟಿಯ ಕುರಿತಂತೆ ಮತಗಟ್ಟೆ ಸಂಖ್ಯೆ 137ರಿಂದ 145ರವರೆಗಿನ ಬಿ.ಎಲ್.ಓ. ಗಳ ಕಾರ್ಯವೈಖರಿ ಹಾಗೂ ಪ್ರಗತಿ ಕಾರ್ಯದ ಕುರಿತು ಹುಲಕೋಟಿ ಗ್ರಾಮ ಆಡಳಿತ ಅಧಿಕಾರಿ ಶ್ರೀಮತಿ ವಿ.ಬಿ ಪಾಟೀಲ ಸರಿಯಾಗಿ ಮೇಲ್ವಿಚಾರಣೆ ಜರುಗಿಸದೇ ತೀವ್ರ ಕರ್ತವ್ಯ ಲೋಪವೆಸಗಿ, ಸರಕಾರಿ ನೌಕರನಿಗೆ ತಕ್ಕುದಲ್ಲದ ರೀತಿಯಲ್ಲಿ ನಡೆದುಕೊಂಡು ಪ್ರಜಾ ಪ್ರಾತಿನಿಧ್ಯ ಕಾಯ್ದೆ, 1950 ಕಲಂ 32 ಹಾಗೂ ಕರ್ನಾಟಕ ರಾಜ್ಯ ನಾಗರಿಕ ಸೇವಾ ನಡತೆ ನಿಯಮಗಳು 2021 ರ ನಿಯಮ 3ರಲ್ಲಿನ (1)(2)(3) ಗಳನ್ನು ಉಲ್ಲಂಘಿಸಿರುವುದು ಮೇಲ್ನೋಟಕ್ಕೆ ಕಂಡು ಬಂದ ಕಾರಣ ಹುಲಕೋಟಿ ಗ್ರಾಮ ಆಡಳಿತ ಅಧಿಕಾರಿ ಶ್ರೀಮತಿ ವಿ.ಬಿ. ಪಾಟೀಲ ಅವರನ್ನು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 10(1)(ಡಿ)ರನ್ವಯ ತಕ್ಷಣದಿಂದ ಜಾರಿಗೆ ಬರುವಂತೆ ವಿಚಾರಣೆ ಕಾಯ್ದಿರಿಸಿ ಸರ್ಕಾರಿ ಸೇವೆಯಿಂದ ಅಮಾನತ್ತುಗೊಳಿಸಲಾಗಿದ್ದು, ಈ ಸಂದರ್ಭದಲ್ಲಿ ಗದಗ ತಹಸೀಲ್ದಾರ ಅವರ ಪೂರ್ವಾನುಮತಿ ಇಲ್ಲದೇ ಕೇಂದ್ರ ಸ್ಥಾನ ಬಿಡತಕ್ಕದಲ್ಲ ಎಂದು ಜಿಲ್ಲಾಧಿಕಾರಿಗಳು ಆದೇಶ ಹೊರಡಿಸಿದ್ದಾರೆ.

ಪುಸ್ತಕ ಪರಿಚಯ

# ಮನ ತಣಿಸುವ ‘ಅರಿವಿನ ದೀಪ’ದ ಕವನಗಳು

ಮುಂಡರಗಿ ಕೆ.ಆರ್ ಬೆಲ್ಲದ ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ಆರ್. ಎಲ್ ಪೊಲೀಸ್‌ಪಾಟೀಲರು ತಮ್ಮ ನಿವೃತ್ತಿಯ ನಂತರ ಗಂಭೀರವಾಗಿ ಕಾವ್ಯ ಪ್ರಕಾರದೆಡೆಗೆ ಹೊರಳಿದ್ದಾರೆ. ಈ ಮೊದಲು ಅವರು ಅನೇಕ ಸ್ವತಂತ್ರ ಕೃತಿಗಳ ಮೂಲಕ, ಸಂಪಾದಿತ ಗ್ರಂಥಗಳಿಗೆ ಸಂಪಾದಕರಾಗಿ, ಆಗೀಗ ಕವನಗಳನ್ನು ವಾಚಿಸುವ ಮೂಲಕ ಸಾಹಿತ್ಯದ ಕೃಷಿಯಲ್ಲಿ ತೊಡಗಿಕೊಂಡಿದ್ದರು. ‘ಅರಿವಿನ ದೀಪ’ ಅವರ ಸ್ವತಂತ್ರ ರಚನೆಯ 65 ಕವನಗಳನ್ನು ಒಳಗೊಂಡ ಒಂದು ಕವನ ಸಂಕಲನ. ಈ ಸಂಕಲನದ ಕವಿತೆಗಳು ಓದುಗನಿಗೆ ಓದಿನ ಆನಂದವನ್ನು ನೀಡುತ್ತ ಓದಿಸಿಕೊಂಡು ಹೋಗುತ್ತವೆ. ಅಲ್ಲಲ್ಲಿ ಓದುಗನ ಮನವನ್ನು ತಣಿಸುವಲ್ಲಿ ಸಫಲವಾಗಿವೆ.

ಅಗಲಿದ ಅವರ ಧರ್ಮಪತ್ನಿ ವಿಜಯಲಕ್ಷ್ಮಿಯವರನ್ನು ಕುರಿತು ಅವರು ಮೂರು ಕವನಗಳನ್ನು ಬರೆದಿದ್ದಾರೆ. ನಡುವೆಯೇ ಜೀವನ ಪಥವನ್ನು ನಿಲ್ಲಿಸಿದ ಧರ್ಮಪತ್ನಿಯ ಬಗ್ಗೆ ಪಾಟೀಲರ ಭಾವನಾತ್ಮಕ ಒಲವು ಎಂತಹುದು ಎಂಬುದು ಈ ಕವನಗಳಲ್ಲಿ ಕಂಡುಬರುತ್ತದೆ. ಕವನಗಳ ಅವಲೋಕನ ಮಾಡುತ್ತ ಹೋದಂತೆ ಕೆಲವಷ್ಟು ಕವನಗಳು ಒಂದರ ಛಾಯೆಯಂತೆ ಇನ್ನೊಂದು ಕಾಣುವ ಹಾಗೆ ಅನಿಸುತ್ತವೆ.

ಇನ್ನುಳಿದಂತೆ ಬಸವಣ್ಣನವರ ಬಗ್ಗೆ ಆರು ಕವನಗಳನ್ನು ಬರೆದಿದ್ದು, ಬಸವಣ್ಣನವರ ಕಾಯಕ ತತ್ವ, ಕಲ್ಯಾಣದ ಸಂಸತ್ತು ಮುಂತಾದವುಗಳ ವಿವರಣೆ ಇದೆ. 36 ವರ್ಷಗಳ ಕಾಲ ಶಿಕ್ಷಕ ವೃತ್ತಿ ನಿರ್ವಹಿಸಿದ ಪಾಟೀಲರು ಕವನವನ್ನು ಬರೆದಿರುವುದರಲ್ಲಿ ಅಚ್ಚರಿಯೇನಿಲ್ಲ. ಆದರೆ, ಅದರಲ್ಲಿ ಬರುವ

**‘ನೀನಲ್ಲ ಕಲ್ಲು ದೇವರ ನಿರ್ಮಾಪಕ**
**ನೆನಪಿರಲಿ ನೀ ಜೀವಂತ ದೇವರ ಸಂಸ್ಥಾಪಕ**
**ನೀನಾಗು ವಿದ್ಯಾರ್ಥಿಗಳ ಆದರ್ಶ ಶಿಕ್ಷಕ**
**ಆಗುವುದು ನಿನ್ನ ಜೀವನ ಸಾರ್ಥಕ.**

**ದುರ್ವ್ಯಸನಗಳ ದಾಸನಾಗದಿರು**
**ಪುಸ್ತಕ ವ್ಯಾಸಂಗ ಮರೆಯದಿರು**
**ಆಗು ನೀ ಮಕ್ಕಳಿಗೆ ಜ್ಞಾನ ಬೋಧಕ**
**ನೀನಾಗು ಅನ್ವೇಷಣೆಯ ಸಾಧಕ.**

**ಸಂಬಳಕೆ ಶ್ರಮಿಸದಿರು ಶಕ್ತಿಮೀರಿ**
**ಪ್ರೀತಿಸು ವೃತ್ತಿಯ ಮಿತಿಮೀರಿ**
**ನೀನಾಗು ಮಕ್ಕಳ ಏಳಿಗೆಯ ಹರಿಕಾರ**
**ಸದಾ ಚಿಂತಿಸು ಸಮಾಜದ ಉದ್ಧಾರ**

ಸಾಲುಗಳು ಮನಸ್ಸನ್ನು ಮುದಗೊಳಿಸುವುದರ ಜೊತೆಗೆ, ಶಿಕ್ಷಕರು ಹೇಗಿರಬೇಕು ಎಂಬುದರ ಎಚ್ಚರಿಕೆಯನ್ನು ನೀಡುವಲ್ಲಿ ಸಫಲವಾಗಿವೆ. ಅನ್ನದಾನೀಶ್ವರ ಮಠದ ಪೀಠಾಧಿಪತಿ ಜ. ಅನ್ನದಾನೇಶ್ವರ ಮಹಾಸ್ವಾಮಿಗಳವರ ಬಗ್ಗೆ ಅಪರಿಮಿತವಾದ ಪ್ರೀತಿ, ಭಕ್ತಿ, ವಿಶ್ವಾಸವನ್ನು ಇರಿಸಿಕೊಂಡಿರುವ ಪಾಟೀಲರು ಅವರ ಬಗ್ಗೆಯೇ ಕವನವೊಂದನ್ನು ಬರೆಯುವ ಮೂಲಕ ಸಂಕಲನಕ್ಕೆ ಮುನ್ನುಡಿ ಬರೆದಿದ್ದಾರೆ. ಅಂದು-ಇಂದು ಕವನ ಅಂದು-ಇಂದಿನ ಸಾಮಾಜಿಕ ಸ್ಥಿತಿಯನ್ನು ವಾಸ್ತವವಾಗಿ ತೆರೆದಿಡುವುದರಲ್ಲಿ ಸಫಲವಾಗಿದೆ. ಪ್ರಜಾಪ್ರಭುತ್ವದ ವಿಪರ್ಯಾಸ ಇಂದಿನ ಸ್ಥಿತಿಗೆ ಕನ್ನಡಿ ಹಿಡಿದಿದೆ. ಜನ್ಮದಿನ, ಪುನೀತ,




‘ಅರಿವಿನ ದೀಪ’(ಕವನ ಸಂಕಲನ)
ಲೇಖಕರು: ಆರ್.ಎಲ್ ಪೊಲೀಸ್‌ಪಾಟೀಲ.
ಪುಟಗಳು: 140.
ಬೆಲೆ: 150 ರೂ.
ಪ್ರಕಾಶಕರು: ಶ್ರೀ ಜ. ಅನ್ನದಾನೀಶ್ವರ ಧರ್ಮ-ಸಂಸ್ಕೃತಿ ಪ್ರಚಾರ ಮಂಡಳಿ, ಮುಂಡರಗಿ.

ಅಗಲಿದ ಶಿಷ್ಯೆಯರು, ಕನ್ನಡ ನಾಡು, ಬನ್ನಿ ಹಬ್ಬ, ಬನಶಂಕರಿ, ವಿವೇಕಾನಂದ, ಸಾವಿತ್ರಿಬಾಯಿ ಫುಲೆ, ರೈತ, ಸಂಕ್ರಾಂತಿ ಹೀಗೆ ವಿಷಯ ವೈವಿಧ್ಯತೆಯಿಂದ ಕವನ ಸಂಕಲನ ಓದುಗನ ಮನವನ್ನು ಸೆಳೆಯಲು ಪ್ರಯತ್ನಿಸಿ ಸಫಲವಾಗಿದೆ.

ಸಂಕಲನದಲ್ಲಿ ಗಮನ ಸೆಳೆಯುವ ಇನ್ನೊಂದು ಕವನವೆಂದರೆ ನಿಜಗುರು. ಕೇವಲ ವಿಷಯಗಳನ್ನು ಮಾತ್ರ ಕಲಿಸಿದರೆ ಆತ ಗುರುವಲ್ಲ ಎಂದು ಹೇಳುತ್ತ, ಪ್ರತಿ ನುಡಿಯ ಕೊನೆಯಲ್ಲಿ ಅವರು ನೀಡುವ ಸಂದೇಶ ಕವನಕ್ಕೊಂದು ಹೊಸ ತಿರುವು ನೀಡಿದೆ. ನಡೆ-ನುಡಿಯ ಕಲಿಸಿದಾತನೆ ನಿಜಗುರು, ಅರಿವು-ಆಚಾರ ಕಲಿಸಿದಾತನೆ ನಿಜಗುರು, ಸಂಸ್ಕಾರ-ಸಂಸ್ಕೃತಿ ಕಲಿಸಿದಾತನೆ ನಿಜಗುರು ಇತ್ಯಾದಿ ನುಡಿಗಳು ಮನಸ್ಸಿಗೆ ಹಿಡಿಸುತ್ತವೆ. ಇಂತಹುದೇ ಇನ್ನೊಂದು ಕವನ ‘ಯಾರು ಶ್ರೀಮಂತರು?’ ಇಲ್ಲಿಯೂ ಪಾಟೀಲರು ಹೀಗಿಯೇ ಹೇಳುತ್ತ ಹೋಗುತ್ತಾರೆ. ಗುಣವಂತರೇ ನಿಜ ಶ್ರೀಮಂತರು, ವಿಶಾಲ ಹೃದಯಿಗಳೇ ನಿಜ ಶ್ರೀಮಂತರು ಇತ್ಯಾದಿ ಸಾಲುಗಳೂ ಸಹ ಮನಕ್ಕೆ ಹಿಡಿಸುತ್ತವೆ.

ಜಾನಪದ ಕೋಗಿಲೆ ಯಾರ ಕುರಿತು ಎಂಬುದರ ಗುಟ್ಟನ್ನು ಬಿಟ್ಟುಕೊಡುವುದಿಲ್ಲ. ಕಿವುಡು ಕುರುಬ ಓದುಗನ ಮೊಗದಲ್ಲಿ ನಗೆ ಮೂಡಿಸಲು ಪ್ರಯತ್ನಿಸುತ್ತದೆ. ಆದರೆ ಈ ಕವನ ಸಂಕಲನಕ್ಕೆ ಅದು ಹೊಂದಿಕೆಯಾದಂತಿಲ್ಲ. ಇದರೊಂದಿಗೆ ಪಾಟೀಲರು ತಮ್ಮ ಹನಿಗವನಗಳ ಮೂಲಕ ಬಿಟ್ಟ ಸ್ಥಳವನ್ನು ತುಂಬಲು ಪ್ರಯತ್ನಿಸಿದ್ದು, ಅದರಲ್ಲಿ ಕೆಲವಷ್ಟು ಗಮನ ಸೆಳೆಯುತ್ತವೆ. ಹೆಸರಿಸಬಹುದಾದವುಗಳೆಂದರೆ ಜಾದೂಗಾರ, ಮೆರವಣಿಗೆ, ಚುನಾವಣೆ, ಜನಪ್ರತಿನಿಧಿ, ಸಂಪತ್ತು, ಮಂಗನಾಟ ಇತ್ಯಾದಿಗಳು. ಇಡಿಗವನ ಮತ್ತು ಹನಿಗವನಗಳ ಮೂಲಕ ಕಾವ್ಯ ರಸಿಕನ ಮನಸ್ಸನ್ನು ಸೆಳೆಯಲು ಪ್ರಯತ್ನಿಸಿರುವ ಪಾಟೀಲರ ಕವಿತ್ವಕ್ಕೆ ಇನ್ನಷ್ಟು ಯಶಸ್ಸು ಸಿಗಲಿ ಎಂದು ಹಾರೈಸೋಣ.

**-ಅರುಣ ಬಿ ಕುಲಕರ್ಣಿ**
ನರೇಗಲ್ಲ-ಕೋಡಿಕೊಪ್ಪ.

# ಮಕ್ಕಳಿಗೆ ಸಾತ್ವಿಕ ಆಹಾರ ಪದ್ಧತಿಯನ್ನು ಕಲಿಸಿ

■ವಿಜಯಸಾಕ್ಷಿ ಸುದ್ದಿ, ಮುಂಡರಗಿ

ಬೆಳಗಿನ ಸಮಯದಲ್ಲಿ ಮಕ್ಕಳು ಪೌಷ್ಟಿಕಾಂಶಗಳಿಂದ ಕೂಡಿರುವ ಮೊಳಕೆ ಕಟ್ಟಿದ ಕಾಳುಗಳು, ಹಸಿ ತರಕಾರಿಗಳು, ರಾಗಿ ಗಂಜಿ ಮತ್ತು ಬೆಲ್ಲವನ್ನು ಸೇವಿಸಬೇಕು. ಇತ್ತೀಚಿನ ದಿನಗಳಲ್ಲಿ ಮಕ್ಕಳಲ್ಲಿ ಆರೋಗ್ಯದ ಸಮಸ್ಯೆ ಹೆಚ್ಚಾಗಿ ಕಂಡುಬರುವುದರಿಂದ ನಮ್ಮ ಸಾತ್ವಿಕ ಆಹಾರ ಪದ್ಧತಿಯನ್ನು ಮಕ್ಕಳಿಗೆ ಹೇಳಿಕೊಡಬೇಕಿದೆ ಎಂದು ಹಿಮಾಲಯ ಯೋಗ ಕೇಂದ್ರದ ಸಂಚಾಲಕಿ ಮಂಜುಳಾ ಇಟಗಿ ಹೇಳಿದರು.

ಇಲ್ಲಿನ ಹಿಮಾಲಯ ಯೋಗ ಕೇಂದ್ರದಲ್ಲಿ ಮಕ್ಕಳಿಗೆ ಯೋಗಾಭ್ಯಾಸದೊಂದಿಗೆ ಆರೋಗ್ಯಕರ ಜೀವನಶೈಲಿಯನ್ನು ಅಳವಡಿಸಿಕೊಳ್ಳುವ ಕುರಿತು ಅವರು ಮಾಹಿತಿ ನೀಡಿದರು. ಯೋಗ ತರಬೇತಿ ಪಡೆಯುತ್ತಿರುವ ವಿದ್ಯಾರ್ಥಿಗಳಾದ ಕೃತಿಕಾ, ಸ್ನೇಹ, ಪ್ರತಿಮಾ, ಪ್ರಿಯಾ ಮೇಟಿ, ತನುಶ್ರೀ, ಸೌಮ್ಯ, ಸಾಕ್ಷಿ, ಸಾಧನಾ, ರಿತು ಮುಂತಾದವರು ಮಾಹಿತಿ ಪಡೆದುಕೊಂಡರು.



# ಶ್ರೀಗಜಾನನ ಉತ್ಸವ ಸಮಿತಿಗೆ ಪದಾಧಿಕಾರಿಗಳ ಆಯ್ಕೆ



■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಹಳೇ ಸರಾಫ ಬಜಾರದ ಎಸ್‌ಎಸ್‌ಕೆ ಸಮಾಜದ ಶ್ರೀ ಜಗದಂಬಾ ದೇವಸ್ಥಾನದ ಶ್ರೀ ಸಹಸ್ರಾರ್ಜುನ ಸಮುದಾಯ ಭವನದ ಲಕ್ಷ್ಮಣಸಾ ಸಭಾಗೃಹದಲ್ಲಿ 2023-24ನೇ ಸಾಲಿನ ಶ್ರೀ ಗಜಾನನ ಉತ್ಸವದ ಪೂರ್ವಭಾವಿ ಸಭೆ ಜರುಗಿತು.

ಎಸ್‌ಎಸ್‌ಕೆ ಸಮಾಜ ತರುಣ ಸಂಘದ ಉಪಾಧ್ಯಕ್ಷ ಮಾಧು ಬದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ, ಉತ್ಸವ ಉಪ-ಸಮಿತಿ ಚೇರಮನ್‌ರಾಗಿ ರಾಘವೇಂದ್ರ ಬಾಂಡಗೆ, ವೈಸ್ ಚೇರಮನ್‌ರಾಗಿ ನೇಮಚಂದ ಪವಾರ, ಗೌರವ ಕಾರ್ಯದರ್ಶಿಯಾಗಿ ಪ್ರಶಾಂತ ಕಾಟವಾ, ಸಹಕಾರ್ಯದರ್ಶಿಯಾಗಿ ಸಂಜು ಖಟವಟೆ, ಖಜಾಂಚಿಯಾಗಿ ಪರಶುರಾಮ ಬದಿ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಈ ಸಭೆಯಲ್ಲಿ ಪೂಜಾ ಸಮಿತಿ, ದಾಸೋಹ ಸಮಿತಿ, ಅಲಂಕಾರ ಸಮಿತಿ, ಪ್ರಸಾದ ಸಮಿತಿ, ಕ್ರೀಡಾ ಸಮಿತಿ, ಮೆರವಣಿಗೆ ಸಮಿತಿ, ಸಾಂಸ್ಕೃತಿಕ ಕಾರ್ಯಕ್ರಮ ಸಮಿತಿ, ಪ್ರಚಾರ ಸಮಿತಿ, ಅಥಾವೆ ಪತ್ರಿಕೆ ಸಮಿತಿ ಸೇರಿದಂತೆ ಇನ್ನಿತರ ಸಹ ಸಮಿತಿಗಳನ್ನು ರಚಿಸಲಾಯಿತು. ಮಾಜಿ ಚೇರಮನ್ ಶ್ರೀಕಾಂತ ಅರಸಿದ್ದಿ ಅವರನ್ನು ತರುಣ ಸಂಘದಿಂದ ಸನ್ಮಾನಿಸಲಾಯಿತು. ವಿವಿಧ ಕಲಾತಂಡಗಳೊಂದಿಗೆ ವಿಜೃಂಭಣೆಯಿಂದ ಮೆರವಣಿಗೆಯನ್ನು ಆಚರಿಸಲು ಸಭೆಯಲ್ಲಿ ನಿರ್ಧರಿಸಲಾಯಿತು.

ಸಭೆಯಲ್ಲಿ ತರುಣ ಸಂಘದ ಗೌರವ ಕಾರ್ಯದರ್ಶಿ ನಾಗರಾಜ ಖೋಡೆ, ಖಜಾಂಚಿ ಶ್ರೀನಿವಾಸ ಬಾಂಡಗೆ, ಸಹಕಾರ್ಯದರ್ಶಿ ಶ್ರೀಕಾಂತ ಬಾಕಳೆ, ತರುಣ ಸಂಘದ ಸದಸ್ಯರಾದ ಸುಧೀರ ಕಾಟಿಗರ, ಕಿಶನ್ ಮೆರವಾಡೆ, ಅಶೋಕ ಬೇವಿನಕಟ್ಟಿ, ಮುರಳಿ ಹಬೀಬ, ರಾಮಚಂದ್ರ ಶಿದ್ಲಿಂಗ, ಚಂದನ ಖಟವಟೆ, ಜಗದೀಶ ಪವಾರ, ಪ್ರವೀಣ ಜಿತೂರಿ, ಮುಖೇಶ ಬಾಂಡಗೆ, ಮಾಣಿಕ ಪವಾರ ಸೇರಿದಂತೆ ಸಮಾಜದ ತರುಣರು, ಸಮಾಜ ಬಾಂಧವರು ಉಪಸ್ಥಿತರಿದ್ದರು.

# ಕಲುಷಿತ ನೀರಿನಿಂದ ಸಾವು ಸಂಭವಿಸಿದರೆ ಜಿ ಪಂ ಸಿಇಒ ಅಮಾನತು

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಕಲುಷಿತ ನೀರು ಸೇವನೆಯಿಂದ ಮರಣ ಪ್ರಕರಣಗಳು ಮರುಕಳಿಸಿದರೆ ಜಿ ಪಂ ಸಿಇಒಗಳನ್ನು ನೇರವಾಗಿ ಹೊಣೆಗಾರರನ್ನಾಗಿಸಿ ಅಮಾನತು ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಕೆ ನೀಡಿದ್ದಾರೆ.

ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆ ಕುರಿತಂತೆ ಮಂಗಳವಾರ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಕಲುಷಿತ ನೀರು ಸೇವನೆಯಿಂದ ಸಾವು ಪ್ರಕರಣಗಳಾದರೆ ನಗರ ಸಭೆಗಳ ಆಯುಕ್ತರ ಮೇಲೆ ಕ್ರಮ ಕೈಗೊಳ್ಳಲಾಗುವುದು ಎಂದು ಖಡಕ್ ಸೂಚನೆ ನೀಡಿದರು. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಬಡವರು ವಾಸಿಸುವ ಕೊಳಗೇರಿಗಳಲ್ಲಿ ಕುಡಿಯುವ ನೀರಿನ ಪೈಪ್‌ಲೈನ್ ಹಾಗೂ ಚರಂಡಿ ನೀರಿನ ಪೈಪುಗಳು ಪ್ರತ್ಯೇಕವಾಗಿರುವುದನ್ನು ಖಾತ್ರಿಪಡಿಸಬೇಕು. ಪ್ರತ್ಯೇಕ ಇಲ್ಲದಿರುವ ಸ್ಥಳಗಳನ್ನು ಗುರುತಿಸಿ ನೈರ್ಮಲ್ಯ ಅಭಿಯಾನ ಕೈಗೊಂಡು, 15 ದಿನಗಳಲ್ಲಿ ಈ ಕುರಿತು ವರದಿ ಸಲ್ಲಿಸಬೇಕು ಎಂದು ಸಿಎಂ ಸೂಚಿಸಿದರು.

# ಬಸವ ಕೇಂದ್ರದಿಂದ ಮಕ್ಕಳಿಗೆ ಹಾಲು ವಿತರಣೆ

■ವಿಜಯಸಾಕ್ಷಿ ಸುದ್ದಿ, ಗದಗ

ತಾಲೂಕಿನ ಕಳಸಾಪೂರ ಗ್ರಾಮದ ಬಸವಕೇಂದ್ರ ವತಿಯಿಂದ ಸೋಮವಾರ ಅಂಗನವಾಡಿ ಮಕ್ಕಳು, ಶಾಲಾ ಮಕ್ಕಳಿಗೆ ಹಾಲು ವಿತರಿಸುವ ಕಾರ್ಯಕ್ರಮ ಜರುಗಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಗ್ರಾಮದ ಹಿರಿಯರಾದ ನಾಗಪ್ಪ ಅಣ್ಣಿಗೇರಿ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಎಸ್.ಬಿ ಗೌಡರ, ಅತಿಥಿಗಳಾಗಿ ಬಸವಕೇಂದ್ರದ ಕಾರ್ಯಾಧ್ಯಕ್ಷ ಮಲ್ಲಿಕಾರ್ಜುನ ಖಂಡಮ್ಮನವರ, ಯಲ್ಲಪ್ಪ ಹಾದಿಮನಿ ಆಗಮಿಸಿದ್ದರು.



ಕಾರ್ಯಕ್ರಮ ಉದ್ದೇಶಿಸಿ ಮಲ್ಲಿಕಾರ್ಜುನ ಖಂಡಮ್ಮನವರ ಮಾತನಾಡಿ, ನಾವು ಯಾವುದೇ ಜೀವಿಗೆ ಸಂತೋಷವಾಗುವಂತಿದ್ದರೆ ಅದನ್ನು ಪ್ರೀತಿಸುತ್ತೇವೆ. ಆಚರಣೆಗಳನ್ನು ಅನುಸರಿಸುತ್ತೇವೆ. ನಾಗರ ಪಂಚಮಿ ದಿನದಂದು ಕಲ್ಲು ನಾಗಪ್ಪನಿಗೆ ಹಾಲು ಎರೆದು ಹಾಲನ್ನು ಹಾಳು ಮಾಡುತ್ತಾರೆ. ಜಡವಾದ ಕಲ್ಲಿಗೆ ಹಾಲರೆಯುವುದರಿಂದ ಏನು ಪ್ರಯೋಜನ? ನಾಗರಾಜನ ಬಗ್ಗೆ ನಮ್ಮ ವಿರೋಧವಿಲ್ಲ. ನಾಗರಹಾವು ಕೃಷಿ ಭೂಮಿಯಲ್ಲಿ ಕ್ರಿಮಿ-ಕೀಟಗಳನ್ನು ತಿಂದು ಬದುಕುತ್ತದೆ. ಅದು ರೈತನ ಮಿತ್ರ. ಆದರೆ, ನಾವು ಮಾಡುವ ಆಚರಣೆಗೆ ಸರಿಯಾದ ಗುರಿಯಿಲ್ಲ. ತಾತ್ವಿಕ ಬದ್ಧತೆಯಿಲ್ಲ ಎಂದರು.

ಶಿವನಗೌಡರ ಮಾತನಾಡಿ, ಪ್ರತಿವರ್ಷ ಬಸವ ಪಂಚಮಿ ನಿಮಿತ್ತ ಕಲ್ಲು, ಮಣ್ಣಿನ ಹಾವಿಗೆ ಅಭಿಷೇಕ ಮಾಡುವ ಬದಲಾಗಿ, ಶಾಲಾ ಮತ್ತು ಅಂಗನವಾಡಿ ಮಕ್ಕಳಿಗೆ, ಬಡಮಕ್ಕಳಿಗೆ ಹಾಲು ನೀಡುವುದು ಉಪಯುಕ್ತವಾದದ್ದು ಎಂದು ಹೇಳಿದರು. ಸ್ವಾಗತ, ನಿರೂಪಣೆಯನ್ನು ಶರಣಪ್ಪ ಹುಯಿಲಗೋಳ ನೆರವೇರಿಸಿದರು.

# ಕಾಮನ್‌ವೆಲ್ತ್ ಸಂಸದೀಯ ಸಮ್ಮೇಳನದಲ್ಲಿ ಕರ್ನಾಟಕದ ಪ್ರತಿನಿಧಿಗಳು

■ವಿಜಯಸಾಕ್ಷಿ ಸುದ್ದಿ, ಉದಯಪುರ

ರಾಜಸ್ಥಾನದ ಉದಯಪುರದಲ್ಲಿ ನಡೆಯುತ್ತಿರುವ ಕಾಮನ್‌ವೆಲ್ತ್ ಸಂಸದೀಯ ಸಂಘದ ಭಾರತ ವಲಯದ ಸಮ್ಮೇಳನದಲ್ಲಿ ಕರ್ನಾಟಕ ರಾಜ್ಯದ ಪ್ರತಿನಿಧಿಗಳಾಗಿ ಕರ್ನಾಟಕ ವಿ ಪ ಸಭಾಪತಿಗಳಾದ ಬಸವರಾಜ್ ಹೊರಟ್ಟಿ, ವಿಧಾನಸಭಾಧ್ಯಕ್ಷರಾದ ಯು.ಟಿ ಖಾದರ್, ರಾಜ್ಯ ವಿ ಪ ಉಪಸಭಾಪತಿಗಳಾದ ಎಂ.ಕೆ ಪ್ರಾಣೇಶ್, ಅಧಿಕಾರಿ ವೃಂದದ ಪರವಾಗಿ ಪರಿಷತ್ತಿನ ಕಾರ್ಯದರ್ಶಿ ಕೆ.ಆರ್ ಮಹಾಲಕ್ಷ್ಮೀ, ಸಭಾಪತಿಗಳ ಆಪ್ತ ಕಾರ್ಯದರ್ಶಿ ಶೈಲಾ ಕೆ.ಡಿ ಮುಂತಾದವರು ಭಾಗವಹಿಸಿದ್ದರು.



ಈ ಸಮಾವೇಶದಲ್ಲಿ ರಾಜ್ಯದ ಸಭಾಧ್ಯಕ್ಷರು, ಉಪಸಭಾಧ್ಯಕ್ಷರು, ಸಭಾಪತಿಗಳು, ಉಪಸಭಾಪತಿಗಳು ಆಯಾ ರಾಜ್ಯದ ಪ್ರಮುಖ ಅಧಿಕಾರಿ ವೃಂದದವರು ಭಾಗವಹಿಸಿದ್ದಾರೆ. ದೇಶದ ಪ್ರಗತಿ ಹಾಗೂ ಅಭಿವೃದ್ಧಿಯ ಮುನ್ನೋಟವು ಪ್ರಜಾಪ್ರಭುತ್ವದ ಪರಿಣಾಮಕಾರಿ ಚಟುವಟಿಕೆಗಳ ಮೇಲೆ ಅವಲಂಬಿತವಾಗಿರುವ ವಿಷಯ ಹಾಗೂ ಜನಪ್ರತಿನಿಧಿಗಳ ಹೊಣೆಗಾರಿಕೆಗಳ ಕುರಿತು ಚಿಂತನ-ಮಂಥನ ನಡೆಯಲಿದೆ.

# ಪದವಿಪೂರ್ವ ಕಾಲೇಜುಗಳ ಕ್ರೀಡಾಕೂಟದಲ್ಲಿ ಸಾಧನೆ



■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ತಾಲೂಕಿನ ಬೆಳ್ಳಟ್ಟಿಯ ಬಿ.ಪಿ ಅಳವಂಡಿ ಸರಕಾರಿ ಬಾಲಕಿಯರ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಬನ್ನಿಕೊಪ್ಪದಲ್ಲಿ ನಡೆದ ಶಿರಹಟ್ಟಿ ತಾಲೂಕು ಪದವಿಪೂರ್ವ ಕಾಲೇಜುಗಳ ಕ್ರೀಡಾಕೂಟದಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ.

ಬಾಲಕಿಯರ ವಿಭಾಗದ ವಾಲಿಬಾಲ್, ಖೋಖೋ ಹಾಗೂ ಥ್ರೋ ಬಾಲ್‌ನಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ. ವೈಯಕ್ತಿಕ ಸ್ಪರ್ಧೆಗಳಲ್ಲಿ ಸರಪಳಿ ಗುಂಡು ಎಸೆತದಲ್ಲಿ ಸುಮಾ ಉಪ್ಪಾರ ಪ್ರಥಮ, 200 ಮೀಟರ್‌ನಲ್ಲಿ ಕವನ ಛಬ್ಬಿ ಪ್ರಥಮ, ಉದ್ದ ಜಿಗಿತದಲ್ಲಿ ಮಧು ಶಿರಹಟ್ಟಿ ಪ್ರಥಮ, ತ್ರಿವಿಧ ಜಿಗಿತದಲ್ಲಿ ಹಾಗೂ ಅಡೆತಡೆ ಓಟದಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ.

ವಿಜೇತ ವಿದ್ಯಾರ್ಥಿಗಳಿಗೆ ಕಾಲೇಜಿನ ಪ್ರಾಚಾರ್ಯರು ಹಾಗೂ ಶಿಕ್ಷಕ-ಸಿಬ್ಬಂದಿ ವರ್ಗದವರು ಅಭಿನಂದನೆ ಸಲ್ಲಿಸಿದ್ದಾರೆ.

ಲಿಂ.ಮುದುಕನಗೌಡ ಪಾಟೀಲರ ಸ್ಮರಣೋತ್ಸವ ಕಾರ್ಯಕ್ರಮದಲ್ಲಿ ಪ್ರೊ. ಎಸ್.ಎಸ್ ಪಟ್ಟಣಶೆಟ್ಟರ

# ಕಲಕೇರಿ ಪಾಟೀಲರ ಮನೆತನ ತಾಲೂಕಿನ ಚಿತ್ರಣವನ್ನೇ ಬದಲಿಸಿತು



ಕಪ್ಪತಗುಡ್ಡದ ರಕ್ಷಣೆಗೆ ಕಟಿಬದ್ಧರಾಗಿದ್ದ ಪಾಟೀಲರು ಪರಿಸರ ಪ್ರೇಮಿಗಳಾಗಿದ್ದರು. ನ್ಯಾಯನಿಷ್ಠುರಿ ದಾಕ್ಷಿಣ್ಯಪರನಲ್ಲ ಎಂಬಂತಿದ್ದ ಮುದುಕನಗೌಡರು ಸಹಕಾರ ತತ್ವದಲ್ಲಿ ಅಚಲ ನಂಬಿಕೆಯುಳ್ಳವರಾಗಿದ್ದರು. ಜಾತಸ್ಯ ಮರಣಂ ಧ್ರುವಂ ಎಂಬಂತೆ 1971ರಲ್ಲಿ ಲಿಂಗೈಕ್ಯರಾದರು. ಅವರು ನಮ್ಮನ್ನು ಅಗಲಿದರೂ ಅವರ ಕೆಲಸಗಳು ಮುಂಡರಗಿ ತಾಲೂಕಿನಲ್ಲಿ ಚಿರಸ್ಥಾಯಿಯಾಗಿ ಉಳಿದಿವೆ.

**- ಪ್ರೊ. ಎಸ್.ಎಸ್ ಪಟ್ಟಣಶೆಟ್ಟರ.**
ತೋಂಟದಾರ್ಯ ವಿದ್ಯಾಪೀಠದ ಕಾರ್ಯದರ್ಶಿಗಳು.

■ವಿಜಯಸಾಕ್ಷಿ ಸುದ್ದಿ, ಗದಗ

ಸಹಕಾರಿ ಕ್ಷೇತ್ರಕ್ಕೆ ಗದಗ ಜಿಲ್ಲೆ ಅದ್ವಿತೀಯ ಕೊಡುಗೆ ನೀಡಿದೆ. ಇಲ್ಲಿನ ಕಲಕೇರಿ ಪಾಟೀಲರ ಕುಟುಂಬ ಸಹ ನಾಡಿನ ಸಹಕಾರಿ ಕ್ಷೇತ್ರಕ್ಕೆ ಅಪಾರ ಕೊಡುಗೆ ಸಲ್ಲಿಸಿದೆ ಎಂದು ತೋಂಟದಾರ್ಯ ವಿದ್ಯಾಪೀಠದ ಕಾರ್ಯದರ್ಶಿ ಪ್ರೊ. ಎಸ್.ಎಸ್ ಪಟ್ಟಣಶೆಟ್ಟರ ನುಡಿದರು.

ನಗರದ ತೋಂಟದಾರ್ಯ ಮಠದಲ್ಲಿ ಇತ್ತೀಚೆಗೆ ಜರುಗಿದ 2654ನೇ ಶಿವಾನುಭವದಲ್ಲಿ ಲಿಂ.ಮುದುಕನಗೌಡ ಪಾಟೀಲ ಇವರ ಸ್ಮರಣೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಒಂದು ಸುಸಂಸ್ಕೃತ ಲಿಂಗಾಯತ ಮನೆತನ ಹೇಗಿರಬೇಕು ಎಂಬುದಕ್ಕೆ ಕಲಕೇರಿ ಗೌಡರ ಕುಟುಂಬ ಮಾದರಿಯಾಗಿದೆ. ಮುದುಕನಗೌಡ ಪಾಟೀಲ, ಎಸ್.ಎಸ್ ಪಾಟೀಲ ಹಾಗೂ ಟಿ.ಎಸ್ ಪಾಟೀಲ ಈ ಮೂರೂ ಜನ ಸಹೋದರರು ನಾಡಿನ ಆದರ್ಶ ವ್ಯಕ್ತಿಗಳಾಗಿ ಬೆಳೆದಿದ್ದು ಈ ಕುಟುಂಬದ ವಿಶೇಷತೆ. ಶ್ರೀ ತೋಂಟದಾರ್ಯ ಮಠಕ್ಕೂ ಈ ಮನೆತನಕ್ಕೂ ಅವಿನಾಭಾವ ಸಂಬಂಧವಿದ್ದು, ಮುಂಡರಗಿ ತಾಲೂಕಿನ ಚಿತ್ರಣವನ್ನು ಬದಲು ಮಾಡಿದ ಶ್ರೇಯಸ್ಸು ಕಲಕೇರಿ ಪಾಟೀಲರ ಮನೆತನಕ್ಕೆ ಸಲ್ಲುತ್ತದೆ. ಊರಗೌಡರಾಗಿದ್ದರೂ ಸಹ ಹಮ್ಮು-ಬಿಮ್ಮುಗಳನ್ನು ಅಂಟಿಸಿಕೊಳ್ಳದೇ ಬಸವಣ್ಣನವರ ಎನಗಿಂತ ಕಿರಿಯರಿಲ್ಲ ಎಂಬ ವಾಣಿಯನ್ನು ಜೀವನದಲ್ಲಿ ಅಳವಡಿಸಿಕೊಂಡು ಅಜಾತಶತ್ರುಗಳಾಗಿ ಬಾಳಿದರು.

ಸಭೆಯಲ್ಲಿ ಉಪಸ್ಥಿತರಿದ್ದ ಮಾಜಿ ಸಚಿವ ಎಸ್.ಎಸ್ ಪಾಟೀಲರು ಅವರ ಸಹೋದರರ ತ್ಯಾಗ-ಸೇವೆಗಳ ಕುರಿತು ಮಾತನಾಡಿದರು. ಲಿಂಗಾಯತ ಪ್ರಗತಿಶೀಲ ಸಂಘದ ಅಧ್ಯಕ್ಷ ಶೇಖಣ್ಣ ಕಳಸಾಪೂರಶೆಟ್ರ ಸ್ವಾಗತಿಸಿದರು. ಪೂಜ್ಯ ಚಂದ್ರಶೇಖರ ದೇವರು ಸಮ್ಮುಖ ವಹಿಸಿದ್ದರು. ಕು.ಸೌಜನ್ಯ ಪಾಟೀಲ ಹಾಗೂ ಪಂಚಾಕ್ಷರ ಗವಾಯಿಗಳವರ ಸಂಗೀತ ಮಹಾವಿದ್ಯಾಲಯದ ವಿದ್ಯಾರ್ಥಿಗಳಿಂದ ವಚನ ಸಂಗೀತ ಜರುಗಿತು. ಆಕಾಶಗೌಡ ಕುರಹಟ್ಟಿ ಧರ್ಮಗ್ರಂಥ ಪಠಿಸಿದರೆ, ಗಾಯತ್ರಿ ಕುರಹಟ್ಟಿ ವಚನ ಚಿಂತನಗೈದರು. ಮಾಜಿ ಸಚಿವ ಎಸ್.ಎಸ್ ಪಾಟೀಲರ 89ನೇ ಜನ್ಮದಿನದ ನಿಮಿತ್ತ ಅವರ ಅಭಿಮಾನಿ ಬಳಗದವರು ಈ ಕಾರ್ಯಕ್ರಮ ಸಂಘಟಿಸಿ ದಾಸೋಹ ಸೇವೆ ವಹಿಸಿಕೊಂಡಿದ್ದರು.

**ನೀವೂ ನಮ್ಮ ಜೊತೆ ಕೈಜೋಡಿಸಿ**
**‘ವಿಜಯಸಾಕ್ಷಿ’**
ನಿಮ್ಮ ಮನೆಯ, ಮನದ ಪತ್ರಿಕೆ ಆಗಲೆಂದು ನಾವು ಬಯಸುತ್ತೇವೆ. ಇಲ್ಲಿ ನಿಮ್ಮ ಅಭಿಪ್ರಾಯ ಹಂಚಿಕೊಳ್ಳಲು ಮುಕ್ತ ಸ್ವಾಗತವಿದೆ.
ನೀವು ಪತ್ರಿಕೆಯ ಕುರಿತು ತಮ್ಮ ಸಲಹೆ, ಮೆಚ್ಚುಗೆ ನಮಗೆ ಬರೆದು ಕಳಿಸಿ..
ಲೇಖನ, ಸಣ್ಣ ಕತೆ, ಕವನ, ಪ್ರಬಂಧ, ಪ್ರವಾಸ ಅನುಭವ ಈ ಕುರಿತು ನೀವೂ ಬರೆಯಬಹುದು.
E-mail: vijayasakshidaily@gmail.com
ಮೊ : 9019256545

# ಸೋಮೇಶ್ವರನಿಗೆ ಕ್ಷೀರಾಭಿಷೇಕ



**■ವಿಜಯಸಾಕ್ಷಿ ಸುದ್ದಿ, ನರೇಗಲ್ಲ**

ಇಲ್ಲಿನ ಐತಿಹಾಸಿಕ ಶ್ರೀ ಸೋಮೇಶ್ವರನಿಗೆ ಶ್ರಾವಣ ಮಾಸದ ಮೊದಲ ಸೋಮವಾರದಂದು ಕ್ಷೀರಾಭಿಷೇಕ, ಜಲಾಭಿಷೇಕ ನಡೆಯಿತು. ಸೋಮನಾಥ ಗ್ರಾಮಪುರೋಹಿತ ಕುಟುಂಬ ವರ್ಗದವರು ಪೂಜೆಯನ್ನು ನೆರವೇರಿಸಿದರು.

ಪೂಜಾ ಕಾರ್ಯದ ನೇತೃತ್ವವನ್ನು ವಹಿಸಿದ್ದ ಶ್ರೀವಲ್ಲಭಟ್ಟರು ಮಾತನಾಡಿ, ಸರ್ವ ರೋಗಗಳನ್ನು ಕಳೆದು ಮನಸ್ಸಿಗೆ ನೆಮ್ಮದಿಯನ್ನು ನೀಡುವ ಅನೇಕ ದೇವರುಗಳಲ್ಲಿ ಈಶ್ವರನದು ಮಹತ್ವದ ಸ್ಥಾನ. ಅವನನ್ನು ಭಕ್ತಿ, ಶ್ರದ್ಧೆಯಿಂದ ಪೂಜಿಸಿದರೆ ಎಲ್ಲ ಸೌಭಾಗ್ಯಗಳನ್ನು ಕರುಣಿಸುತ್ತಾನೆ. ಅವನ ಪ್ರಾರ್ಥನೆ ಮತ್ತು ಪೂಜೆಯಿಂದ ಕುಟುಂಬದಲ್ಲಿ ಶಾಂತಿ, ನೆಮ್ಮದಿ ನೆಲೆಸುತ್ತದೆ. ಇಂದು ನೆರವೇರಿಸಿದ ಈ ಪೂಜಾ ಫಲವು ಸೇವೆಯಲ್ಲಿ ಪಾಲ್ಗೊಂಡ ಸರ್ವರಿಗೂ ದೊರೆಯುತ್ತದೆ ಎಂದರು.

ವಿಶ್ವನಾಥಭಟ್ಟ ವೈದ್ಯ ಮಾತನಾಡಿ, ಸೋಮೇಶ್ವರನಿಗೆ ಅಭಿಷೇಕವೆಂದರೆ ಬಲು ಪ್ರೀತಿ. ಅಭಿಷೇಕ ಮಾಡಿದವರ ಮತ್ತು ಇದರಲ್ಲಿ ಪಾಲ್ಗೊಂಡವರ ದೋಷಗಳನ್ನೆಲ್ಲ ಕಳೆಯುತ್ತಾನೆ. ಶ್ರಾವಣ ಮಾಸದಲ್ಲಿ ಮಾಡುವ ಪೂಜೆ, ಅಭಿಷೇಕಕ್ಕೆ ಬಹಳಷ್ಟು ಮಹತ್ವವಿದೆ.

ಇದರಿಂದ ಸೋಮನಾಥ ಗ್ರಾಮಪುರೋಹಿತರವರ ಕುಟುಂಬದವರಿಗೂ, ಈ ಪೂಜೆಯಲ್ಲಿ ಪಾಲ್ಗೊಂಡ ನಮಗೂ ಖಂಡಿತ ಒಳ್ಳೆದಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ಅರುಣ ಗ್ರಾಮಪುರೋಹಿತ, ವಿಶ್ವನಾಥ ಗ್ರಾಮಪುರೋಹಿತ, ಮುಕುಂದ ಸೂರ್ಯಭಟ್ಟನವರ, ನಾಗರಾಜ ನಾಡಿಗೇರ, ದತ್ತಂಭಟ್ಟ ಗ್ರಾಮಪುರೋಹಿತ, ಅಜಿತ ಕುಲಕರ್ಣಿ, ಬಾಬಣ್ಣ ಕಾಳೆ, ಶಂಕ್ರಪ್ಪ ಕುಲಕರ್ಣಿ, ಕೃಷ್ಣ ಗ್ರಾಮಪುರೋಹಿತ, ಭಾರ್ಗವ ಕುಲಕರ್ಣಿ, ಶೇಷಣ್ಣ ಕುಲಕರ್ಣಿ, ಎಸ್.ಎಚ್ ಕುಲಕರ್ಣಿ, ಕೃಷ್ಣ ದೇಸಾಯಿ, ಅರುಣ ಬಿ.ಕುಲಕರ್ಣಿ ಮುಂತಾದ ಭಕ್ತಾದಿಗಳು ಪಾಲ್ಗೊಂಡಿದ್ದರು.

## ನವಲಗುಂದ ಮತಕ್ಷೇತ್ರದ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ ಶಾಸಕ ಎನ್.ಎಚ್ ಕೋನರೆಡ್ಡಿ

# ಅಧಿಕಾರಿಗಳು ಗ್ರಾಮಗಳ ಅಭಿವೃದ್ಧಿಗೆ ಒತ್ತು ನೀಡಿ





**■ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ**

ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಹಲವು ದೂರುಗಳು ಬಂದಿವೆ. ಗ್ರಾಮೀಣ ಪ್ರದೇಶಗಳಲ್ಲಿ ಹಲವಾರು ಸಮಸ್ಯೆಗಳು ತಲೆದೋರಿದೆ. ಹೀಗಾಗಿ, ಗ್ರಾಮಗಳ ಅಭಿವೃದ್ಧಿಗೆ ಅಧಿಕಾರಿಗಳು ಹೆಚ್ಚಿನ ಒತ್ತು ನೀಡಬೇಕು ಎಂದು ಶಾಸಕ ಎನ್.ಎಚ್ ಕೋನರೆಡ್ಡಿ ಹೇಳಿದರು.

ದೇಶಪಾಂಡೆ ನಗರದ ಸವಾಯಿ ಗಂಧರ್ವ ಸಭಾಭವನದಲ್ಲಿ ಮಂಗಳವಾರ ನವಲಗುಂದ ಮತಕ್ಷೇತ್ರದ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆ ಹಾಗೂ ಹುಬ್ಬಳ್ಳಿ ತಾಲೂಕಿನ 26 ಗ್ರಾಮ ಪಂಚಾಯಿತಿಗಳಿಗೆ 2ನೇ ಅವಧಿಗೆ ನೂತನವಾಗಿ ಆಯ್ಕೆಯಾದ ಅಧ್ಯಕ್ಷರು, ಉಪಾಧ್ಯಕ್ಷರುಗಳಿಗೆ ಅಭಿನಂದನಾ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಗ್ರಾಮೀಣ ಭಾಗದ ಹೊಲಗಳಿಗೆ ಚಲಿಸುವ ರಸ್ತೆಗಳು ಹದಗೆಟ್ಟಿವೆ. ಅಲ್ಲದೇ ಮುಖ್ಯ ರಸ್ತೆಗಳು ಸಹ ಕಿತ್ತು ಹೋಗಿವೆ. ಹೀಗಾಗಿ ಬಸ್‌ಗಳು ಓಡಾಡಲು ತೊಂದರೆಯಾಗಿದ್ದು, ಗ್ರಾಮಗಳಿಗೆ ಬಸ್‌ಗಳು ಹೆಚ್ಚಾಗಿ ಓಡಾಡುತ್ತಿಲ್ಲ. ಕಳೆದ ಸಾರಿ 36 ಗ್ರಾಮಗಳಲ್ಲಿ ಗ್ರಾಮ ವಾಸ್ತವ್ಯ ಮಾಡಿದ್ದೆ. ಈಗಾಗಲೇ ಶಿರಕೋಳ, ತಿರ್ಲಾಪೂರ ಗ್ರಾಮಗಳಲ್ಲಿ ಗ್ರಾಮ ವಾಸ್ತವ್ಯ ಮಾಡಿದ್ದೇನೆ. ಎಲ್ಲ ಕಡೆ ಚಕ್ಕಡಿ ರಸ್ತೆ ನಿರ್ಮಾಣಕ್ಕೆ ಒತ್ತು ನೀಡಲಾಗಿದ್ದು, ನಮ್ಮ ಹೊಲ ನಮ್ಮ ದಾರಿ ಯೋಜನೆಯಡಿ ಈಗಾಗಲೇ 8 ಚಕ್ಕಡಿ ರಸ್ತೆಗಳು ಮುಕ್ತಾಯವಾಗಿವೆ. ಗ್ರಾಮ ಪಂಚಾಯತ ಅಧಿಕಾರಿಗಳು ಬೇರೆ ಬೇರೆ ಗ್ರಾಮಗಳಿಗೆ ವರ್ಗಾವಣೆಗೊಂಡು ಸೇವೆ ಸಲ್ಲಿಸಬೇಕು. ಇದರಿಂದ ಗ್ರಾಮಗಳ ಅಭಿವೃದ್ಧಿಗೆ ಸಹಾಯಕವಾಗಲಿದೆ ಎಂದು ತಿಳಿಸಿದರು.

> ಸರ್ವೆ ಅಧಿಕಾರಿಗಳು ಸರಿಯಾಗಿ ಸರ್ವೆ ಕಾರ್ಯ ಮಾಡಬೇಕು. ಮನೆಗಳಿಗೆ ನೀರು ನುಗ್ಗುತ್ತಿರುವ ಸಮಸ್ಯೆಯನ್ನು ಬಗೆಹರಿಸಿ, ಕುಡಿಯುವ ನೀರು ಒದಗಿಸುವ ಪೈಪ್‌ಗಳನ್ನು ಸರಿಯಾಗಿ ಅಳವಡಿಸಬೇಕಾಗಿದೆ. ಶಾಲೆಗಳು ಮೂಲ ಸೌಕರ್ಯದ ಸಮಸ್ಯೆಗಳನ್ನು ಎದುರಿಸುತ್ತಿವೆ. ಅಧಿಕಾರಿಗಳು ಖುದ್ದು ತಮ್ಮ ಕಾರ್ಯವ್ಯಾಪ್ತಿಯ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲನೆ ಮಾಡಬೇಕು. ಇಲ್ಲದಿದ್ದಲ್ಲಿ ಬೇರೆ ಕಡೆಗೆ ವರ್ಗಾವಣೆಗೊಳ್ಳಲು ಸಿದ್ಧರಾಗಬೇಕಾಗಬಹುದು.
>
> **– ಎನ್.ಎಚ್ ಕೋನರೆಡ್ಡಿ.**
> ಶಾಸಕರು.

ಪ್ರಧಾನಮಂತ್ರಿ ಫಸಲ್ ಭಿಮಾ ಯೋಜನೆಯಡಿ ರೈತರಿಗೆ ಬೆಳೆ ಪರಿಹಾರ ಒದಗಿಸಬೇಕಾಗಿದೆ. ರೈತರಿಗೆ ಮೋಸವಾಗದಂತೆ ಕ್ರಮ ವಹಿಸಬೇಕು. ನವಲಗುಂದ ಕ್ಷೇತ್ರದಲ್ಲಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗಿದ್ದು, ಅಶುದ್ಧ ನೀರಿನಿಂದ ಜನರು ರೋಗಗಳಿಗೆ ತುತ್ತಾಗುತ್ತಿದ್ದಾರೆ. ಅಧಿಕಾರಿಗಳು ಶುದ್ಧ ಕುಡಿಯುವ ನೀರು ಒದಗಿಸಲು ಕ್ರಮ ವಹಿಸುವುದು ಅತೀ ಅವಶ್ಯಕವಾಗಿದೆ. ಅಧಿಕಾರಿಗಳು ಜನರ ಸಮಸ್ಯೆಗಳಿಗೆ ಸೂಕ್ತವಾಗಿ ಸ್ಪಂದಿಸಬೇಕು ಎಂದರು.

ವಿವಿಧ ಇಲಾಖೆಗಳ ಅಧಿಕಾರಿಗಳು ತಮ್ಮ ತಮ್ಮ ಇಲಾಖೆಯ ವರದಿಯನ್ನು ಸಭೆಗೆ ತಿಳಿಸಿದರು. ಹುಬ್ಬಳ್ಳಿ ತಾಲೂಕಿನ 26 ಗ್ರಾಮ ಪಂಚಾಯಿತಿಗಳಿಗೆ 2ನೇ ಅವಧಿಗೆ ನೂತನವಾಗಿ ಆಯ್ಕೆಯಾದ ಅಧ್ಯಕ್ಷರು, ಉಪಾಧ್ಯಕ್ಷರನ್ನು ಸನ್ಮಾನಿಸಲಾಯಿತು. ಭಾರತೀಯ ರೆಡ್ ಕ್ರಾಸ್ ಸಂಸ್ಥೆಯಿಂದ ರೈತರಿಗೆ ತಾಡಪತ್ರಿಗಳನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ಹುಬ್ಬಳ್ಳಿ ಗ್ರಾಮೀಣ ತಹಸೀಲ್ದಾರ ಪ್ರಕಾಶ ನಾಶಿ, ಅಣ್ಣಿಗೇರಿ ತಹಸೀಲ್ದಾರ ಶಿವಾನಂದ ಹೆಬ್ಬಳ್ಳಿ, ನವಲಗುಂದ ತಹಸೀಲ್ದಾರ ಸುಧೀರ ಸಾವುಕಾರ, ತಾ ಪಂ ಕಾರ್ಯನಿರ್ವಾಹಕಾಧಿಕಾರಿ ಡಾ. ರಾಮಚಂದ್ರ ಹೊಸಮನಿ, ಅಣ್ಣಿಗೇರಿ, ನವಲಗುಂದ ತಾ ಪಂ ಕಾರ್ಯನಿರ್ವಾಹಕಾಧಿಕಾರಿ ಭಾಗ್ಯಶ್ರೀ ಜಹಗೀರದಾರ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ ಉಪಸ್ಥಿತರಿದ್ದರು.

ಕೋಳಿವಾಡ ಗ್ರಾ ಪಂ ಅಭಿವೃದ್ಧಿ ಅಧಿಕಾರಿ ಎಫ್.ಡಿ ತೋಟದ ಪ್ರಾರ್ಥಿಸಿದರು. ಅಕ್ಷರ ದಾಸೋಹ ಯೋಜನೆಯ ಸಹಾಯಕ ನಿರ್ದೇಶಕ ಸಂಗಮೇಶ ಬಂಗಾರಿಮಠ ಸ್ವಾಗತಿಸಿದರು.

# ಅಬ್ಬಿಗೇರಿ ಸರ್ಕಾರಿ ಪ್ರೌಢಶಾಲೆಗೆ ಸಮಗ್ರ ವೀರಾಗ್ರಣಿ ಪ್ರಶಸ್ತಿ



**■ವಿಜಯಸಾಕ್ಷಿ ಸುದ್ದಿ, ನರೇಗಲ್ಲ**

ಸಮೀಪದ ಅಬ್ಬಿಗೇರಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳು ಈಚೆಗೆ ನರೇಗಲ್ಲ ಪಟ್ಟಣದಲ್ಲಿ ಜರುಗಿದ ವಲಯ ಮಟ್ಟದ ಪ್ರೌಢಶಾಲೆಗಳ ಕ್ರೀಡಾಕೂಟದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ.

ಗಂಡು ಮಕ್ಕಳ ವಿಭಾಗದ ಗುಂಪು ಆಟಗಳಾದ ಖೋಖೋ, ರಿಲೇಯಲ್ಲಿ ಪ್ರಥಮಸ್ಥಾನ, ಥ್ರೋಬಾಲ್‌ನಲ್ಲಿ ದ್ವಿತೀಯ ಸ್ಥಾನ, ವೈಯಕ್ತಿಕ ವಿಭಾಗದ ಎತ್ತರ ಜಿಗಿತ-ಸಂತೋಷ ಅಸುಂಡಿ ಪ್ರಥಮ, ಉದ್ದ ಜಿಗಿತ-ಮಾಂತೇಶ ಮಾಳವಾಡ ಪ್ರಥಮ ಸ್ಥಾನ ಪಡೆದುಕೊಂಡಿದ್ದಾರೆ.

ಹೆಣ್ಣು ಮಕ್ಕಳ ವಿಭಾಗದಲ್ಲಿ ಗುಂಪು ಆಟಗಳಾದ ಥ್ರೋಬಾಲ್, ಖೋಖೋ, ರಿಲೇಗಳಲ್ಲಿ ಪ್ರಥಮ, ವಾಲಿಬಾಲ್‌ನಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾರೆ.

ವೈಯಕ್ತಿಕ ವಿಭಾಗದಲ್ಲಿ ವಿಜಯಲಕ್ಷ್ಮೀ ಹಳ್ಳಿ 100ಮೀ, 200ಮೀ, 100ಮೀ ಹಡಲ್ಸ್ ಸ್ಪರ್ಧೆಗಳಲ್ಲಿ ಪ್ರಥಮ, ಸುಶ್ಮಿತಾ ಬನ್ನಿಗೋಳ 1500ಮೀ, 3000ಮೀ ಓಟದಲ್ಲಿ ಪ್ರಥಮ, ಸಂಜನಾ ತಳವಗೇರಿ 800ಮೀ ಓಟದಲ್ಲಿ ಪ್ರಥಮ, ಎತ್ತರ ಜಿಗಿತದಲ್ಲಿ ಉಮಾ ಮೂಲಿಮನಿ ಪ್ರಥಮ ಸ್ಥಾನ ತಮ್ಮದಾಗಿಸಿಕೊಂಡಿದ್ದಾರೆ.

ಸಾಧನೆಗೈದ ಅಬ್ಬಿಗೇರಿ ಸರ್ಕಾರಿ ಪ್ರೌಢಶಾಲೆಯ ಎಲ್ಲಾ ಕ್ರೀಡಾಪಟುಗಳನ್ನು ಹಾಗೂ ತರಬೇತಿಗೊಳಿಸಿದ ಶಾಲೆಯ ದೈಹಿಕ ಶಿಕ್ಷಕಿ ಎಸ್.ಆರ್ ಬಂಡ್ರಿ ಇವರಿಗೆ ಶಾಲೆಯ ಮುಖ್ಯೋಪಾಧ್ಯಾಯ ರಾಮು. ಕೆ.ಚವ್ಹಾಣ, ಸರ್ವ ಶಿಕ್ಷಕ-ಸಿಬ್ಬಂದಿ ವರ್ಗ, ಎಸ್‌ಡಿಎಂಸಿ ಅಧ್ಯಕ್ಷ ವೆಂಕಟಸಿಂಗ್ ಹಜಾರೆ ಹಾಗೂ ಸರ್ವ ಸದಸ್ಯರು ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

# ಬೀದಿ ಬದಿ ವ್ಯಾಪಾರಸ್ಥರಿಗೆ ಗುರುತಿನ ಚೀಟಿ ವಿತರಿಸಲು ಮನವಿ



**■ವಿಜಯಸಾಕ್ಷಿ ಸುದ್ದಿ, ಗದಗ**

ಗದಗ ಜಿಲ್ಲಾ ಹೂವಿನ ವ್ಯಾಪಾರಸ್ಥರ ಸಂಘ ಮತ್ತು ಗದಗ ಜಿಲ್ಲಾ ಹಣ್ಣು ಮತ್ತು ಕಿರುಕೋಳ ವ್ಯಾಪಾರಸ್ಥರ ಸಂಘಗಳ ಅಧ್ಯಕ್ಷರುಗಳಾದ ಉಮರ ಫಾರೂಕ ಹುಬ್ಬಳ್ಳಿ, ರಾಜಾಖಾನ ಗುಲಾಮಖಾನ ಪಠಾಣ ಇವರ ನೇತೃತ್ವದಲ್ಲಿ ಬೀದಿ ವ್ಯಾಪಾರಿಗಳಿಗೆ ಗುರುತಿನ ಚೀಟಿ ಮತ್ತು ಛತ್ರಿಗಳನ್ನು ವಿತರಿಸುವಂತೆ ಗದಗ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಮನವಿ ಸಲ್ಲಿಸಿ ಮಾತನಾಡಿದ ಉಮರ ಫಾರೂಕ ಹುಬ್ಬಳ್ಳಿ, ಗದಗ-ಬೆಟಗೇರಿ ನಗರಸಭೆ ವತಿಯಿಂದ ಬೀದಿ ಬದಿ ವ್ಯಾಪಾರಿಗಳ ಸಮೀಕ್ಷೆಯನ್ನು ಅಧಿಕೃತವಾಗಿ ಕೈಗೊಳ್ಳಲಾಗಿದೆ. ಬೀದಿ ಬದಿ ವ್ಯಾಪಾರಿಗಳ ಜೀವನೋಪಾಯ ಮತ್ತು ವ್ಯಾಪಾರ ನಿಯಂತ್ರಣ ಅಧಿನಿಯಮ 2014ರ ಪ್ರಕಾರ ಬೀದಿ ಬದಿ ವ್ಯಾಪಾರಿಗಳ ಹಿತಾಸಕ್ತಿಗಾಗಿ ಪಟ್ಟಣ ವ್ಯಾಪಾರ ಸಮಿತಿ ರಚನೆಯಾಗಿದೆ. ಆದರೆ ಯಾವುದೇ ರಚನಾತ್ಮಕ ಕಾರ್ಯಗಳು ಜರುಗುತ್ತಿಲ್ಲ. ಸಭೆ ನಡೆಸದೆ ನಿರ್ಣಯಗಳನ್ನು ಕೈಗೊಳ್ಳಲಾಗುತ್ತಿದೆ. ಬೀದಿ ಬದಿ ವ್ಯಾಪಾರಿಗಳ ಅನೇಕ ಸಮಸ್ಯೆಗಳು ನಿವಾರಣೆಯಾಗಲು ಗುರುತಿನ ಚೀಟಿ ಮತ್ತು ಛತ್ರಿಗಳನ್ನು ತಮ್ಮ ವಿಶೇಷ ಅನುದಾನದಲ್ಲಿ ನಿಗದಿಪಡಿಸಿ ಮಂಜೂರು ಮಾಡಬೇಕೆಂದರು.

ಈ ಸಂದರ್ಭದಲ್ಲಿ ಅನ್ವರ ಶಿರಹಟ್ಟಿ, ಅಮೀನಸಾಬ ಧಾರವಾಡ, ಹಜಮತ ಆಲದಕಟ್ಟಿ, ಶರೀಫ ನದಾಫ, ಕೆಂಗೇರಿ, ಸೇರಿದಂತೆ ಅನೇಕ ವ್ಯಾಪಾರಸ್ಥರು ಉಪಸ್ಥಿತರಿದ್ದರು.

ಗದಗ ಜಿಲ್ಲಾ ಲೋಕಾಯುಕ್ತ ಡಿವೈಎಸ್‌ಪಿ ಶಂಕರ ಎಂ ರಾಗಿ ಅವರು 2023ರ ಕೇಂದ್ರ ಗೃಹ ಸಚಿವರ 'ತನಿಖಾ ಕೌಶಲ್ಯ ಪದಕ' ಪ್ರಶಸ್ತಿಗೆ ಆಯ್ಕೆಯಾದ ಹಿನ್ನೆಲೆಯಲ್ಲಿ ಅವರ ಸ್ವಗ್ರಾಮ ಶಿಗ್ಲಿಯಲ್ಲಿ ಕಸಾಪ ಹೋಬಳಿ ಘಟಕ, ಗ್ರಾಮಸ್ಥರಿಂದ ಸನ್ಮಾನಿಸಲಾಯಿತು. ಈ ವೇಳೆ ಪ್ರವೀಣ ಹುಲಗೂರ, ರಾಜು ರಜಪೂತ, ಮಂಜುನಾಥ ಶಂಭೋಜಿ, ಈರಣ್ಣ ಅಕ್ಕೂರ, ಅಮರೇಶ ಹುಲಗೂರ, ವೀರಣ್ಣ ಅಳ್ಳಳ್ಳಿ, ಎನ್.ಡಿ ಮೇಗಿಲಮನಿ, ಆರ್.ಎಂ ಶಿರಹಟ್ಟಿ, ಎನ್.ಎಂ ಅರಳಿ, ಸೋಮು ಬಿ, ಪ್ರಕಾಶ ಬೆಟಗೇರಿ, ಕೇಶವ ಗುಲಗಂಜಿ, ಬಸವರಜ ಹಾಳಕೇರಿ, ಬಾಲಚಂದ್ರ ಹುಲಗೂರ ಮುಂತಾದವರಿದ್ದರು.



# ಪಾಠದೊಂದಿಗೆ ಆಟಕ್ಕೂ ಪ್ರಾಧಾನ್ಯತೆ ನೀಡಿ



**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ವಿದ್ಯಾರ್ಥಿಗಳು ಕ್ರೀಡೆಯಲ್ಲಿ ಭಾಗವಹಿಸುವುದರಿಂದ ಸ್ಪರ್ಧಾ ಮನೋಭಾವ, ಭಾಂದವ್ಯ, ನಾಯಕತ್ವಗುಣ ಬೆಳೆಯುತ್ತದೆ. ಪಾಠದ ಜೊತೆಯಲ್ಲಿ ಆಟಕ್ಕೂ ಪ್ರಾಧಾನ್ಯತೆ ನೀಡುವುದು ಇಂದಿನ ಅಗತ್ಯವಾಗಿದೆ ಎಂದು ಬಿಸಿಎನ್ ವಿದ್ಯಾಸಂಸ್ಥೆಯ ನಿರ್ದೇಶಕ ಲೋಹಿತ್ ನೆಲವಿಗಿ ಹೇಳಿದರು.

ಅವರು ಪಟ್ಟಣದ ಸವಣೂರ ರಸ್ತೆಯಲ್ಲಿರುವ ಬಿಸಿಎನ್(ಪಾಲಿಟೆಕ್ನಿಕ್) ಪ ಪೂ ಕಾಲೇಜಿನಲ್ಲಿ ಪ ಪೂ ಶಿಕ್ಷಣ ಇಲಾಖೆ, ಬಿಸಿಎನ್ ಕಲಾ ವಾಣಿಜ್ಯ ಹಾಗೂ ವಿಜ್ಞಾನ ಕಾಲೇಜು ಇವರ ಸಂಯುಕ್ತಾಶ್ರಯದಲ್ಲಿ ಮಂಗಳವಾರ ನಡೆದ ಲಕ್ಷ್ಮೇಶ್ವರ ತಾಲೂಕು ಮಟ್ಟದ ಪದವಿಪೂರ್ವ ಕಾಲೇಜುಗಳ ಕ್ರೀಡಾಕೂಟವನ್ನು ಉದ್ಘಾಟಿಸಿ ಮಾತನಾಡಿದರು.

ಕ್ರೀಡೆಯು ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಗೆ ಸಹಾಯಕವಾಗಿದೆ. ಇದು ದೈಹಿಕ ಬೆಳವಣಿಗೆಯ ಜೊತೆಗೆ ಅವರ ಬೌದ್ಧಿಕ ಬೆಳವಣಿಗೆಗೆ ಸಹಕಾರಿಯಾಗಿದೆ ಎನ್ನುವ ಅಂಶ ವೈಜ್ಞಾನಿಕವಾಗಿ ದೃಢಪಟ್ಟಿದೆ. ಪಠ್ಯದೊಂದಿಗೆ ಕ್ರೀಡೆಗೂ ಸಮನಾದ ಅವಕಾಶ ನೀಡುವದಕ್ಕೆ ಪ್ರತಿಯೊಬ್ಬ ವಿದ್ಯಾರ್ಥಿಗಳು ಗಮನ ಹರಿಸಬೇಕು ಎಂದು ಹೇಳಿದರು.

ಸಂಸ್ಥೆಯ ನಿರ್ದೇಶಕ ನಾಗರಾಜ ಕುಲಕರ್ಣಿ ಮಾತನಾಡಿ, ಗ್ರಾಮೀಣ ಮಕ್ಕಳು ಕ್ರೀಡೆಯಲ್ಲಿ ಹೆಚ್ಚು ತೊಡಗಿಕೊಳ್ಳುವಂತೆ ಮಾಡುವಲ್ಲಿ ಇಂತಹ ಕ್ರೀಡಾಕೂಟಗಳು ಸಹಕಾರಿಯಾಗಿವೆ. ಕಾಲೇಜು ಹಂತದಲ್ಲಿ ಉತ್ತಮ ಸಾಧನೆ ಮಾಡುವ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಗಮನಹರಿಸಿ, ಆ ಗುರಿಯೊಂದಿಗೆ ಸಾಗುವದು ಅವಶ್ಯವಾಗಿದ್ದು, ನ್ಯಾಯಸಮ್ಮತವಾಗಿ ಆಟಗಳನ್ನು ಆಡಿ ವಿಜೇತರಾಗಿ ಎಂದರು. ಪ್ರಾಚಾರ್ಯ ಡಿ.ಎಸ್ ಪ್ಯಾಟಿ, ಪುರಸಭೆ ಅಧ್ಯಕ್ಷೆ ಜಯಕ್ಕ ಅಂದಲಗಿ, ದೈಹಿಕ ನಿರ್ದೇಶಕ ಎಂ.ಎಂ ಹವಳದ, ವ್ಹಿ.ಎಸ್ ವಿಜಯಕುಮಾರ, ಸುರೇಶ ಕೊಡ್ಲಿ, ಎಂ.ಕೆ ಲಮಾಣಿ, ಆಯ್.ಎಂ ಸಿಂಗಟಾಲೂರ, ಎಂ.ಸಿ ಹಿರೇಮಠ, ಡಾ. ಎನ್.ಹಯವದನ, ಕೃಷ್ಣ ಲಮಾಣಿ ಸೇರಿದಂತೆ ತಾಲೂಕಿನ ಎಲ್ಲ ಪ ಪೂ ಕಾಲೇಜುಗಳ ದೈಹಿಕ ನಿರ್ದೇಶಕರು, ಉಪನ್ಯಾಸಕರು ಇದ್ದರು.

# ಶಿವಾಜಿ ಮಹಾರಾಜರ ಪುತ್ಥಳಿ ಮರುಸ್ಥಾಪನೆಗೆ ಮನವಿ



**■ವಿಜಯಸಾಕ್ಷಿ ಸುದ್ದಿ, ಗದಗ**

ಬಾಗಲಕೋಟೆಯಲ್ಲಿ ಶ್ರೀ ಛತ್ರಪತಿ ಶಿವಾಜಿ ಮಹಾರಾಜರ ಪುತ್ಥಳಿ ತೆರವುಗೊಳಿಸಿದ್ದನ್ನು ಖಂಡಿಸಿ ಮರಾಠಾ ವಿದ್ಯಾವರ್ಧಕ ಸಂಘ ಗದಗ-ಬೆಟಗೇರಿ ಗದಗ ವತಿಯಿಂದ ಪ್ರತಿಭಟಿಸಿ, ಪುನಃ ಶಿವಾಜಿ ಮಹಾರಾಜರ ಪುತ್ಥಳಿಯನ್ನು ಅನಾವರಣಗೊಳಿಸಲು ಅನುಮತಿ ನೀಡಬೇಕು ಎಂದು ಗದಗ ಜಿಲ್ಲಾ ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ ಮರದಕ್ಕನವರ ಇವರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಸಮಾಜದ ಅಧ್ಯಕ್ಷ ವಿನಿತಕುಮಾರ ವಿ.ಜಗತಾಪ, ಕಾರ್ಯದರ್ಶಿ ಶಿವಾಜಿ ಗ್ವಾರಿ, ಉಪಾಧ್ಯಕ್ಷ ಬಸವರಾಜ ಹುಬ್ಬಳ್ಳಿ, ಸದಸ್ಯರಾದ ನಾರಾಯಣರಾವ್ ಗಾಯಕ್ವಾಡ್, ಅಣ್ಣಪ್ಪ ಹೆಬ್ಬಳ್ಳಿ, ಸುರೇಶ್ ಬೇಂದ್ರೆ, ವೀರಣ್ಣ ಪವಾರ, ಮಂಜುನಾಥ ಮಾನೆ, ಅಶೋಕ ಕೆ ಭೋಸಲೆ, ವಿರೂಪಾಕ್ಷಪ್ಪ ಎಂ.ಹೆಬ್ಬಳ್ಳಿ, ಏಕನಾಥಸಾ ಕಾಟೀಗರ, ಸುಭಾಸ ವಿ.ಕದಡಿ, ಮಾರುತಿ ವಿ.ಅರಳೀಕಟ್ಟಿ, ರಾಘವೇಂದ್ರ ಕಾಟೀಗರ, ರಮೇಶ ಎಸ್.ಬಾಬರ ಮುಂತಾದವರು ಉಪಸ್ಥಿತರಿದ್ದರು.

# ಕಂಪ್ಯೂಟರ್ ಮಾನಿಟರ್ ಕಳ್ಳತನ: ಆರೋಪಿಗಳ ಬಂಧನ



**■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ**

ಅ.19ರ ಸಂಜೆ 6 ಗಂಟೆಯಿಂದ ಅ.21ರ ಬೆಳಿಗ್ಗೆ 10.15 ಗಂಟೆಯ ನಡುವಿನ ಅವಧಿಯಲ್ಲಿ ಶಿರಹಟ್ಟಿಯ ತಹಸೀಲ್ದಾರ ಕಚೇರಿಯ ಆಹಾರ ನಿರೀಕ್ಷಕರ ಕಚೇರಿಯಿಂದ ಕಂಪ್ಯೂಟರ್ ಕಳ್ಳತನ ಮಾಡಿದ್ದ ಇಬ್ಬರು ಆರೋಪಿತರನ್ನು ಶಿರಹಟ್ಟಿ ಪಿಎಸ್‌ಐ ಮತ್ತು ತಂಡ 12 ಗಂಟೆಗಳಲ್ಲಿ ಪತ್ತೆ ಹಚ್ಚಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಲೆನೊವೋ ಕಂಪನಿಯ ಕಂಪ್ಯೂಟರ್ ಮಾನಿಟರ್ ಕಳ್ಳತನವಾಗಿರುವ ಬಗ್ಗೆ ಆಹಾರ ನಿರೀಕ್ಷಕರು ಶಿರಹಟ್ಟಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು. ಕೂಡಲೇ ಕಾರ್ಯಪ್ರವೃತ್ತರಾದ ಶಿರಹಟ್ಟಿ ಪೊಲೀಸ್ ಠಾಣೆಯ ಪಿಎಸ್‌ಐ ಈರಣ್ಣ ರಿತ್ತಿ ಮತ್ತು ಸಿಬ್ಬಂದಿಗಳು ಡಿಎಸ್‌ಪಿ ಮತ್ತು ಸಿಪಿಐ ಮಾರ್ಗದರ್ಶನದಲ್ಲಿ 12 ಗಂಟೆಗಳಲ್ಲಿ ಆರೋಪಿತರನ್ನು ಪತ್ತೆ ಮಾಡಿ ಕಳ್ಳತನವಾಗಿದ್ದ ಮಾನಿಟರ್ ವಶಪಡಿಸಿಕೊಂಡು ವಿಚಾರಣೆ ನಡೆಸಿ, ಆರೋಪಿತರನ್ನು ದಸ್ತಗಿರಿ ಮಾಡಿ ನ್ಯಾಯಾಂಗ ಬಂಧನಕ್ಕೊಪ್ಪಿಸಿದ್ದಾರೆ.

ಈ ಕಾರ್ಯಾಚರಣೆಯಲ್ಲಿ ಪಿಎಸ್‌ಐ ಈರಣ್ಣ ರಿತ್ತಿ, ಕ್ರೈಂ ಪಿಎಸ್‌ಐ ವಿಜಯಕುಮಾರ ತಳವಾರ, ಸಿಬ್ಬಂದಿಗಳಾದ ಆರ್.ಎಚ್ ಮುಲ್ಲಾ, ಎಸ್.ಎಚ್ ರಾಮಗೇರಿ, ಹೆಚ್.ಸಿ ದೊಡ್ಡಮನಿ, ಟಿ.ಎನ್ ಕಾರಭಾರಿ, ಆರ್.ವಿ ವೀರಾಪುರ, ಸಿ.ಸಿ ಗುಂಡೂರಮಠ, ಎಫ್.ಎಸ್ ಲಮಾಣಿ ಪಾಲ್ಗೊಂಡಿದ್ದರು.

## 9ನೇ ಕಾಮನ್‌ವೆಲ್ತ್ ಸಂಸದೀಯ ಸಮ್ಮೇಳನದಲ್ಲಿ ಸಭಾಪತಿ ಬಸವರಾಜ ಹೊರಟ್ಟಿ

# ದೇಶದ ಅಭ್ಯುದಯಕ್ಕೆ ಕಟಿಬದ್ಧರಾಗಿ




**■ವಿಜಯಸಾಕ್ಷಿ ಸುದ್ದಿ, ಉದಯಪುರ**

ದೇಶದ ಪ್ರಗತಿ ಹಾಗೂ ಅಭಿವೃದ್ಧಿಯ ಮುನ್ನೋಟವು ಪ್ರಜಾಪ್ರಭುತ್ವ ಸಂಸ್ಥೆಗಳ ಪರಿಣಾಮಕಾರಿ ಕಾರ್ಯಚಟುವಟಿಕೆಗಳ ಮೇಲೆ ಅವಲಂಬಿತವಾಗಿದ್ದು, ಜನಪ್ರತಿನಿಧಿಗಳ ಕ್ರಿಯಾಶೀಲತೆ ಹಾಗೂ ಪಕ್ಷಬೇಧವಿಲ್ಲದ ಅಭಿವೃದ್ಧಿಪರ ಚಿಂತನೆಯಿಂದ ಮಾತ್ರ ರಾಷ್ಟ್ರದ ಭವಿಷ್ಯ ಉಜ್ವಲವಾಗಬಲ್ಲದು ಎಂದು ಕರ್ನಾಟಕ ವಿ ಪ ಸಭಾಪತಿ ಬಸವರಾಜ ಹೊರಟ್ಟಿ ಅಭಿಪ್ರಾಯ ವ್ಯಕ್ತಪಡಿಸಿದರು.

ರಾಜಸ್ಥಾನ ರಾಜ್ಯದ ಉದಯಪುರದಲ್ಲಿ ನಡೆಯುತ್ತಿರುವ ಮೂರು ದಿನಗಳ 9ನೇ ಕಾಮನ್‌ವೆಲ್ತ್ ಸಂಸದೀಯ ಸಂಘದ ಭಾರತ ವಲಯದ ಸಮ್ಮೇಳನದಲ್ಲಿ 'ಪ್ರಜಾಪ್ರಭುತ್ವ ಸಂಸ್ಥೆಗಳ ಮೂಲಕ ರಾಷ್ಟ್ರವನ್ನು ಸದೃಢಗೊಳಿಸುವಲ್ಲಿ ಜನಪ್ರತಿನಿಧಿಗಳ ಪಾತ್ರ' ಎಂಬ ವಿಷಯದ ಕುರಿತು ಅವರು ವಿಚಾರ ಮಂಡಿಸಿದರು.

ಪ್ರಜಾಪ್ರಭುತ್ವ ಬಲವರ್ಧನೆಗೊಳ್ಳುವಲ್ಲಿ ಜನಪ್ರತಿನಿಧಿಗಳ ಪಾತ್ರ ಸಹ ಅಷ್ಟೇ ಮಹತ್ವದ್ದು. ಜಗತ್ತಿನಲ್ಲಿಯೇ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ಹೊಂದಿದ ದೇಶ ನಮ್ಮದು. 140 ಕೋಟಿಗೂ ಹೆಚ್ಚು ಜನಸಂಖ್ಯೆ ಹೊಂದಿದ ಈ ದೇಶದಲ್ಲಿ ವಿವಿಧ ಭಾಷೆ, ಹಲವು ಆಚಾರ-ವಿಚಾರ ಹಾಗೂ ಸಂಪ್ರದಾಯಗಳಿವೆ. ದೇಶದ ಮೂಲೆ ಮೂಲೆಯಿಂದ ಬಂದ ಜನಪ್ರತಿನಿಧಿಗಳೊಂದಿಗೆ ರಾಷ್ಟ್ರದ ಹಿತಕ್ಕಾಗಿ ಹತ್ತಾರು ಮಹತ್ವದ ಸಂಗತಿಗಳನ್ನು ಚಿಂತನ-ಮಂಥನಗೈಯುವ ಈ ಸಮ್ಮೇಳನ ಅತ್ಯಂತ ಮಹತ್ವದ್ದು.

ಧರ್ಮ, ಲಿಂಗಗಳ ಭೇದವಿಲ್ಲದೆ ಜನರ ಅಶೀರ್ವಾದದಿಂದ ಜನಪ್ರತಿನಿಧಿಯಾಗುವ ಅವಕಾಶವನ್ನು ಪ್ರಜಾಪ್ರಭುತ್ವ ಕಲ್ಪಿಸಿಕೊಟ್ಟಿದ್ದು, ಇಂತಹ ಪವಿತ್ರ ಸನ್ನಿವೇಶದಲ್ಲಿ ಜನರ ಬೇಕು-ಬೇಡಗಳ, ದುಃಖ-ದುಮ್ಮಾನಗಳನ್ನು ಆಲಿಸುವ, ಚರ್ಚಿಸುವ, ನಿರ್ವಹಿಸುವ ಔದಾರ್ಯವನ್ನು ಪ್ರತಿಯೊಬ್ಬ ಜನಪ್ರತಿನಿಧಿ ತೋರಬೇಕು. ಪಕ್ಷಬೇಧ ಮರೆತು ಪರಸ್ಪರ ವಿಶ್ವಾಸಾರ್ಹತೆಯಿಂದ ವರ್ತಿಸಿ, ಎಲ್ಲಾ ಜನಪ್ರತಿನಿಧಿಗಳು ನಾಡಿನ ಹಾಗೂ ದೇಶದ ಅಭ್ಯುದಯಕ್ಕೆ ಕಟಿಬದ್ಧರಾಗುವ ಅವಶ್ಯಕತೆಯಿದೆ ಎಂದರು.

> ಪ್ರಜಾಪ್ರಭುತ್ವದ ಸಾರ್ಥಕತೆಯಲ್ಲಿ ಜನಪ್ರತಿನಿಧಿಗಳ ಪಾತ್ರ ಅತ್ಯಂತ ಮಹತ್ವದ್ದಾಗಿದ್ದು, ಜನರ ಸಂಕಷ್ಟ, ಬವಣೆಗಳ ಧ್ವನಿಗೆ ಜನಪ್ರತಿನಿಧಿಗಳು ಕಿವಿಯಾದಾಗ ಮಾತ್ರ ಪ್ರಜಾಪ್ರಭುತ್ವಕ್ಕೆ ನೈಜ ಅರ್ಥ ಬರುತ್ತದೆ. ಜನರ ಮಾನವೀಯ ಅಗತ್ಯತೆಗಳನ್ನು ಕಾನೂನಿನ ಚೌಕಟ್ಟಿಗೆ ತರುವುದೇ ಶಾಸನ ರಚನೆ ಆಗಿದ್ದು, ಈ ಹಂತದಲ್ಲಿ ಕಾರ್ಯಾಂಗ ಮತ್ತು ಶಾಸಕಾಂಗಳೆರಡು ರಥದ ಜೋಡಿ ಗಾಲಿಗಳ ಹಾಗೆ ಚಲಿಸಿದರೆ ಮಾತ್ರ ಪ್ರಜಾಪ್ರಭುತ್ವ ಯಶಸ್ವಿಯಾಗುತ್ತದೆ. ಪ್ರಜಾಪ್ರಭುತ್ವದ ಮುಖ್ಯ ಉದ್ದೇಶಗಳನ್ನು ಅತ್ಯಂತ ದಕ್ಷ ಹಾಗೂ ಪರಿಪೂರ್ಣ ನೆಲೆಗಳಲ್ಲಿ ಈಡೇರಿಸಲು ಇರುವ ಏಕೈಕ ವೇದಿಕೆ ಎಂದರೆ ಉಭಯ ಮಂಡಲದ ಸದನಗಳು.
>
> **– ಬಸವರಾಜ ಹೊರಟ್ಟಿ.**
> ವಿ ಪ ಸಭಾಪತಿಗಳು.

ಮೂರು ದಿನಗಳ ಕಾಲ ನಡೆಯುವ ಸಮ್ಮೇಳನದಲ್ಲಿ ದೇಶದ ಎಲ್ಲಾ ರಾಜ್ಯಗಳ ವಿಧಾನ ಸಭೆಯ ಸಭಾಧ್ಯಕ್ಷರು, ಉಪಸಭಾಧ್ಯಕ್ಷರು ಹಾಗೂ ವಿಧಾನ ಪರಿಷತ್ತಿನ ಸಭಾಪತಿ ಹಾಗೂ ಉಪಸಭಾಪತಿಗಳು ಭಾಗವಹಿಸಿದ್ದಾರೆ. ಲೋಕಸಭಾಧ್ಯಕ್ಷ ಓಂ ಬಿರ್ಲಾ, ರಾಜಸ್ಥಾನದ ಮುಖ್ಯಮಂತ್ರಿ ಅಶೋಕ ಗೆಹ್ಲೋಟ್, ರಾಜ್ಯಸಭೆಯ ಉಪಸಭಾಪತಿ ಹರಿವಂಶ, ರಾಜಸ್ಥಾನದ ವಿಧಾನಸಭಾಧ್ಯಕ್ಷ ಸಿ.ಪಿ ಜೋಷಿ, ಕರ್ನಾಟಕದ ಪ್ರತಿನಿಧಿಗಳಾದ ವಿದಾನಸಭಾಧ್ಯಕ್ಷ ಯು.ಟಿ ಖಾದರ್, ವಿದಾನಪರಿಷತ್ತಿನ ಉಪ ಸಭಾಪತಿ ಎಂ.ಕೆ ಪ್ರಾಣೇಶ, ಅಧಿಕಾರಿ ವೃಂದದ ಪರವಾಗಿ ಪರಿಷತ್ತಿನ ಕಾರ್ಯದರ್ಶಿ ಕೆ.ಆರ್ ಮಹಾಲಕ್ಷ್ಮೀ, ಸಭಾಪತಿಗಳ ಆಪ್ತ ಕಾರ್ಯದರ್ಶಿ ಶೈಲಾ ಕೆ.ಡಿ ಸೇರಿದಂತೆ ರಾಜಸ್ಥಾನದ ಶಾಸಕರು, ಸಂಸದರು ಸಮಾರಂಭದಲ್ಲಿ ಭಾಗವಹಿಸಿದ್ದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka